ಕೊರವಂಜಿ

KURAVANJI

Kannada Monthly

ಸಂಪಾದಕರು:

ಶ್ರೀ|| ರಾ. ಶಿ.

ಉಪಸಂಪಾದಕರು:

ಶ್ರೀ|| ಆ. ರಾ. ಸೇ

ಶ್ರೀ|| ಪ್ರಸಾದ್

ಶ್ರೀ|| ಹಾ. ವೆಂ. ಕಾಂ

ಶ್ರೀ|| ಕೇಫ

ಶ್ರೀ|| ಕೆ. ಎ. [illegible]

ಶ್ರೀ|| ಕುಮಾರ್

ಶ್ರೀ|| [illegible] ದೀಕ್ಷಿತ್



ನಂ೧

೧೯೬೫

೨೫ ಪೈ

ತಿಳಿನಗೆಯ ಮಾಸಪತ್ರಿಕೆ

ವಿದ್ಯುಚ್ಛಕ್ತಿಯ ಮಿತವ್ಯಯಕ್ಕೆ

ಹಾಗೂ

ಪ್ರಕಾಶಮಾನವಾಗಿರುವುದಕ್ಕೆ

★

ಬೆಂಗಾಲ್ ಬಲ್ಬುಗಳು

★

ಬೆಂಗಾಲ್ ಎಲೆಕ್ಟ್ರಿಕಲ್ಸ್, ಬೆಂಗಳೂರು-೩

Koravanji, May 1965

ಕೊರವಂಜಿ

A. ANANTHIAH.

ಸಂಪುಟ ೨೫] ಮೇ ೧೯೬೫ [ಸಂಚಿಕೆ ೨

ಕು ಹ ಕಿ ಡಿ ಗ ಳು

ಕಚ್ ಪ್ರದೇಶದಲ್ಲಿ ಎಣ್ಣೆ ಬರೋಹೊತ್ತಿಗೆ

—ಪಾಕೀಸ್ಥಾನೀಯರು ಕಣ್ಣುಬಿಟ್ಟು ನೋಡಿದರು

* * * *

ನಮ್ಮನೆಯಲ್ಲಿ ಮುಸಿರೆ ತಿಕ್ಕುತ್ತಿದ್ದ ಹುಡುಗಿ ತಿಮ್ಮಿ ಈಗ ಸಿನಿಮಾತಾರೆಯಾಗಿ ಮೆರೆಯುತ್ತಿದ್ದಾಳೆ.

—ಸಿನಿಮಾದಲ್ಲಿ ಮುಸಿರೆ ತಿಕ್ಕುವ ಪಾತ್ರವನ್ನೇ ವಹಿಸುತ್ತಿದ್ದಾಳಂತೆ.

* * * *

ಎಲ್. ಬಿ. ಜಾನ್ಸ್‌ಸನ್ನರು. ಎಲ್. ಬಿ. ಶಾಸ್ತ್ರಿಗಳಿಗೆ

—ಎಲ್. ಬಿ. ಡಬ್ಲ್ಯು ಅಂದರಂತೆ

* * * *

ಗೋವಾದಲ್ಲಿ ಲಿಂಗಾಯಿತರ ಸಂಖ್ಯೆ ಬಲುಕಡಿಮೆ ಎಂದೊಬ್ಬರ ಅಂಬೋಣ.

—ಹೀಗೇ ಶುರುವಾಗೋದು, ಕುಹಕನುಡಿಯಿಂದ, ಕಲಹ, ಯುದ್ಧ.

* * * *

ಸಣ್ಣಪುಟ್ಟ ಕೆಲಸಗಳನ್ನುಕೂಡ ನಮ್ಮ ಪ್ರಧಾನ ಮಂತ್ರಿಯವರು ತಾವೇ ಸ್ವಯಂ ಮಾಡುತ್ತಾರಂತೆ

—ಅಂದರೆ ಚಪಾತಿ ಮತ್ತು ಪಲ್ಯವನ್ನೂನು ?

* * * *

ಹೋದಕೂಡಲೆ ಪರೀಕ್ಷೆಮಾಡಿ ಔಷಧಿ ಕೊಟ್ಟು ಕಳಿಸಿದಾಗ

—ರೋಗಿ ನೇರ ಪೋಲೀಸ್ ಸ್ಟೇಷನ್ನಿಗೆ ಹೋಗಿ, "ಆಸ್ಪತ್ರೆಯಲ್ಲಿ ಯಾರೋ ನಕಲಿ ಡಾಕ್ಟರು ಬಂದಿದ್ದಾರೆ, ಅಂತ ದೂರಿತ್ತನಂತೆ.

ವಿಯಟ್ನಾಂ ಕದನದಲ್ಲಿ ಭಾರತವು ಅಮೆರಿಕನ್ನರಿಗೆ ತಾತ್ವಿಕ ಬೆಂಬಲವನ್ನು ಕೊಡಬೇಕು. ಎಂದು ರಾಜಾಜಿ ಸಕಾರಣವಾಗಿ ಬರೆದಿದ್ದಾರೆ

—ಸೊಸೆ ಮನೆ ಅತ್ತೆಯ ಮಾತನ್ನು ಈ ಕಾಲದಲ್ಲಿ ಯಾರು ಕೇಳುತ್ತಾರೆ ?

* * * *

ಮೂವತ್ತುಸಾವಿರ ಅಕ್ಕಿ ಮೂಟೆಗಳು ಸಾಗಾಣಿಕೆಯಲ್ಲಿ ಕೆಟ್ಟು ಹೋದುವಂತೆ ಆಹಾರಟ್ರೇಡಿಂಗ್ ಕಾರ್ಪೊರೇಷನ್ನಿನ ಅಜಾಗರೂಕತೆಯಿಂದ

—ದುರ್ಭಿಕ್ಷದಲ್ಲಿ ಆಹಾರ ಟ್ರೇಡಿಂಗ್ ಕಾರ್ಪೊರೇಷನ್ ಬೇರೆ !

* * * *

ನಮ್ಮ ಸಾಹೇಬರು ಸಂಗೀತದ ಹಿನ್ನೆಲೆಯಲ್ಲಿ ರುಮಾಲು ಸುತ್ತುತ್ತಾರಂತೆ

—ಅಂದರೆ ಹಾರ್ಮೋನಿಯಂ ಸಂಗೀತ ಇದ್ದರೆ ಮಾರ್ವಾಡಿ ರುಮಾಲು ಸುತ್ತುತ್ತಾರೇನೋ ?

* * * *

ನಾಗಾಲಾಂಡಿನಲ್ಲಿ ಶಾಂತಿ ಮಾತು ಕತೆಗಳು ಮುಂದೂಡಲ್ಪಟ್ಟಿದೆಯಂತೆ

—ಶಸ್ತ್ರಾಸ್ತ್ರಗಳ ಸರಬರಾಜು ದಂಗೆಕೋರ ನಾಗಾಗಳಿಗೆ ಪೂರ್ತಿಯಾದಮೇಲೆ, ಮಾತುಕತೆಗಳನ್ನು ಪುನರಾರಂಭಿಸಬಹುದೇನೋ ?

* * * *

ಸಕ್ಕರೆ ಬೆಲೆಯು ಇಳಿಮುಖವಾಗುತ್ತಿದೆಯಂತೆ

—ನಮ್ಮ ನೆರೆಹೊರೆಯವರಿಗೆ ಈ ಸುದ್ದಿಯಿಂದ ಏನೂ ಖುಷಿಯಾಗಲಿಲ್ಲ.

* * * *

ಪೀಕಿಂಗಿನ ಕಿಂದರಿ ಜೋಗಿಯ ಹಿಂದೆ ಸಣ್ಣಪುಟ್ಟ ಮಗುರಾಷ್ಟ್ರದವರೆಲ್ಲಾ ಕುಣಿಯುತ್ತಾ ಹಿಂಬಾಲಿಸುತ್ತಿದ್ದಾರಂತೆ.

* * * *

ಕಾಮರಾಜರು ಒರಿಸ್ಸಾಕ್ಕೆ ಭೇಟಿ ಕೊಡುತ್ತಾರೆ (ಸುದ್ದಿ)

—ಬೀಜೂಪಾಟ್ನಾಯಕ್ ಅವರ ಅತಿಥಿಗಳಾಗಿರುತ್ತಾರೆ ಎನ್ನುವುದು ಖಚಿತ ವಲ್ಲವಂತೆ.

* * * *

ಕುಂಕುಮ ಹಚ್ಚಿಕೊಂಡ ಭಾರತ ಸ್ತ್ರೀಯರನ್ನು ಕಂಡ ಹಲವರು ಅಮೆರಿಕ ಮಹಿಳೆಯರು, ನಿಮ್ಮ ಗಂಡಂದಿರು ಬರೆಹಾಕಿದರೆ ಎಂದು ಕೇಳಿದರಂತೆ

—ಅಷ್ಟು ಗಂಡಸುತನ ಭಾರತ ಪುರುಷರಿಗೆ ಇದೆಯೆ ?

ಪತ್ರಿಕಾ ನಿಷ್ಠಿಪರಿ—

ಅಕ್ಕ ಕೊರವಂಜಿ ಇಷ್ಟು ವರ್ಷಗಳಿಂದ ನಮ್ಮ ನಗುವನ್ನೆಲ್ಲಾ ಮಡುಲಲ್ಲಿ ಹಾಕಿಕೊಂಡು ಹಂಚುತ್ತಿದ್ದಳು. ಅವಳನ್ನು ಕಣ್ಣುಕಟ್ಟಿ ಕಾಡಿಗೆ ಕಳಿಸುವ ಯೋಚನೆ ನಿಮಗೆ ಬಂದದ್ದು ನಮಗೆಲ್ಲಾ ಅಪಾರ ವ್ಯಥೆಯಾಗಿವೆ. ಇನ್ನು "ಉರಿಗಾಳಿಗೆ" ಎಲ್ಲಿ ಕೈಒಡ್ಡುವುದು ? ಯಾರ ಕುಹಕುಡಿಯ ಕೇಳಿ ಕಿವಿಯಿಂದ ಕಿವಿತನಕ ನಗುವುದು ? ಕಾಡಿನಲ್ಲಿ ಸಿಕ್ಕವಳನ್ನು ಊರಲ್ಲೆಲ್ಲಾ ತಿಳಿನಗೆ ಹಂಚುವ ಕೆಲಸಕ್ಕೆ ಹಾಕಿ ಅವಳನ್ನು ಸಾಕಿ ೨೫ ವರ್ಷದ ತುಂಬು ಜೌವನೆಯನ್ನಾಗಿ ಮಾಡಿ ಕಾಡುಕೋಣದ ಬಾಯಿಗೆ ಪುನಃ ಕಳಿಸುವುದೆ ? ಅಲ್ಲಿ ಯಾರನ್ನು ನಗಿಸಬೇಕು ಈಕೆ ? ಹುಚ್ಚಿಯಂತೆ ತನಗೆ ತಾನೇ ನಗಬೇಕು ಅಷ್ಟೆ.

ವಯಸ್ಸಾದ ಆಕೆಗೆ ಸರಿಯಾದ ಕಡೆ ಗಂಡು ನೋಡಿ ಮುಂದಿನ ಸಂಸಾರಕ್ಕೆ ಅಣಿ ಮಾಡಿಕೊಡುವುದು ಸಾಕುತಂದೆಯ ಜವಾಬ್ದಾರಿ. ನಮಗೆ ಆಕೆಯ ಅಣ್ಣತಮ್ಮಂದಿರಿಗೆ ದಿಕ್ಕು ತೋಚದಾಗಿದೆ. ಅವಳ ತಿಳಿನಗೆಯ ನೆರಳಲ್ಲಿ ನಾವೂ ಕಾಲ ಹಾಕುತ್ತಿದ್ದೆವು. ಈಗ ಅದೂ ಇಲ್ಲದಂತೆ ಮಾಡುವುದೆ ?

ಇದಕ್ಕೆ ಮುಂದಿನ ವ್ಯವಸ್ಥೆ ಏನು ? ಅವಳಿಗೊಂದು ದಿಕ್ಕು ತೋರಿಸಿ ಒಂದು ದೊಡ್ಡ ಚಪ್ಪರ ಹಾಕಿಸಿ ಕಣಿ ಹೇಳಲು ಕೂರಿಸಲು ನಮ್ಮಿಂದ ಆಗಬೇಕಾದ್ದೇನು ಹೇಳಿ. ನಿಮಗೆ ಶಕ್ತಿ ಕುಂದಿತೆಂದು ನಿಮ್ಮ ಹೆಗಲಿಂದ ನೇರ ಕಾಡಿಗೇ ಕಳಿಸುವುದೆ ? ನಮ್ಮ ಶಕ್ತಿ ನಿಮ್ಮ ರಕ್ತ ಸೇರಿ ಹೆಗಲಿಗೆ ಹೆಗಲು ಬದಲಿಸಿ ಮೆರವಣಿಗೆ ಸಾಗಲೇ ಬೇಕೆಂದು ನಮ್ಮ ಆಶೆ.

ಇಷ್ಟೆಲ್ಲ ಕನ್ನಡದ ಕೂಗು—ಕೇಕೇ—ಚಳುವಳಿಯ ಕಾಲದಲ್ಲಿ ಕೊರವಿಗೆ ವನ ವಾಸವೆ ? ಖಂಡಿತ ಕೂಡದು. ನಮಗನ್ನಿಸುವುದು ಎಲ್ಲ ಭಾರ ನೀವೇ ಹೊತ್ತು ಬಳಲಿ ನಿಷ್ಠಿಪರಾಗೇ ಇರುವುದು ಸರಿಯಲ್ಲ. ಸಹಕಾರದ ಈ ದಿನಗಳಲ್ಲಿ ಈ ಕೊರವಿಯ ಗುಡಿಗೆ ಹತ್ತೂ ಕೈಯಿ ಸಹಾಯಮಾಡಲು ಬಂದೀತು—ಒಂದು ಕೊರವಿ ಸಂಘಮಾಡಿ—ನೀವೂ ಪೂಜಾರಿಗಳು ಇದ್ದೇ ಇದ್ದೀರಿ, ಭಕ್ತಾದಿಗಳು ನಾವಿದ್ದೇವೆ. ನಮ್ಮಗಳ ಜೀವಮಾನ ಇರುವವರೆಗಾದರೂ ಉತ್ಸವ ನಡೆದುಹೋಗಲಿ.

ಆದ್ದರಿಂದ ಮುಂದಿನ ಅವಳ ವರ್ಷದ ಹುಟ್ಟುಹಬ್ಬ ದೊಡ್ಡ ದೊಡ್ಡ ಹೆಜ್ಜೆ ಇಕ್ಕಿ, ಬಣ್ಣದ ರವಿಕೆ ತೊಟ್ಟುಕೊಂಡು, ದೊಡ್ಡ ಮದಲಗಿತ್ತಿ ಹಾಂಗೆ ಸಡಗರ ಪಡುವುದನ್ನು ನೋಡುವ ಆಶೆ. ಹಾಗೆ ಮಾಡಲು "ಕೊರವಂಜಿ" ಓದುಗರು ಜಾಹಿರಾತುಗಾರರು, ಕನ್ನಡದ ನಗೆಗಾರರು ಖಂಡಿತ ಮುಂದೆ ಬಂದು ಹೆಗಲು ಕೊಡು ವರೆಂಬ ನಂಬಿಕೆ ಇದೆ. ಇದಕ್ಕೆ ಯತ್ನಿಸಬೇಕಾದ್ದು ನಾವು—ಹಾಗೆ ಮಾಡಬಾರದೇಕೆ ? ಹಾಗೂ ಅವಳನ್ನು ನಿಭಾಯಿಸುವುದು ಆಗಲಿಲ್ಲವೆಂದರೆ ಕಡೆಗೆ ತುಂಬು ಕಾಡಿಗೆ ಕಣ್ಣಿನವ ಳನ್ನು ಕಾಡಿಗೆ ಬಿಟ್ಟುಬಿಡುವುದು ಇದ್ದೇ ಇದೆ.

ಮುಂದೇನು ? ಮಾರ್ಗದರ್ಶಕರು ನೀವು.

೨೦-೪-೧೯೬೫ **ದಾಶರಥಿ ದೀಕ್ಷಿತ್.**

ಯೋಗಕ್ಷೇಮ

ಯೋಗ ಕ್ಷೇಮವ ವಹಿಸುವೆನೆಂದರು
ಮುಪ್ಪಿನ ಕಾಲಕೆ ಹೊಣೆ ನಾವೆಂದರು
ನಂಬಿದೆ ಅವರಾ ಮಾತನ್ನು
ತುಂಬಿದೆ ವಿಮಾ ಪಾಲಿಸಿಯನ್ನು

ಪಕ್ವವಾಯಿತು ಇಂದಾ ಪಾಲಿಸಿ
ಪಕ್ವವೂ ನಾನೂ ಆಗಿಹೆನು
ವಿಮ್ಯಾ ಹಣವೂ ಕೈಯಿಗೆ ಬಂತು
ಕೂಡಿಯೆ ಬೋನಸ್ಸು ಸೇರಿ ಬಂತು
ಆದರೆ ಯೋಗಕ್ಷೇಮ ?
ಮುಪ್ಪಿನ ಕಾಲದ ನೆರವು ?

ಮುಪ್ಪಿನಲಿ ರಕ್ಷಣೆಯು ಇರಲೇ ಬೇಕೆನ್ನುತ್ತ
ಪ್ರಾಯದಲ್ಲಿ ಏನೆಲ್ಲ ಎಚ್ಚರಿಕೆ ವಹಿಸಿದ್ದೆ
ಪೈಸ ಪೈಸೆಯ ಕೂಡಿಸಿ ನಾನು
ಹೊಟ್ಟೆ ಬಟ್ಟೆಯ ಕಟ್ಟಿಟ್ಟು
ವಿಮಾ ಕಂತನು ಸಲಿಸಿದ್ದೆ

ಪೈಸೆ ಪೈಸೆ ಕಾಯುತ್ತಲಿದ್ದರೆ
ಸಹಜವಾಗಿಯೇ ರೂಪಾಯಿ ಭದ್ರ !
ಎಂದೆಲ್ಲ ಹಿರಿಯರು ಅಂದಿದ್ದರು
ಎಂದೆಲ್ಲ ಜಾಣರು ನುಡಿದಿದ್ದರು.

ಹಾಗೆ ಮಾಡಿದರೂ ಈಗ
ರೂಪಾಯಿಗೆ ಏನೋ ಜಡ್ಡು ಹಿಡಿದಿದೆ
ಯಾವ ಜಾಡ್ಯವೊ ಬಿದ್ದಿದೆ
ದಿನದಿನಕ್ಕೂ ಕ್ಷಯ ಬಂದವರಂತೆ
ಸೊರಗಿ ಕೊರಗಿ ಹೋಗಿದೆ.

ವಿಮಾ ಹಣವು, ಮುಪ್ಪಿನೊಡನೆ
ಈಗ ಬಂದು ಸಂದಿತು
ಆವರೂ ಪೈಸೆ ಪೈಸೆ ಕೂಡಿಸಬೇಕು
ಹೊಟ್ಟೆಬಟ್ಟೆಯ ಕಟ್ಟಲೆ ಬೇಕು !!



ಹೊಸ ಪಾರ್ಟಿಗೆ ಸೇರಿಕೋತೀರಿ, ಆಲ್ಲಾದರೂ ಪ್ರವರ್ಧಮಾನಕ್ಕೆ ಬರಲಿ
ಅಂತ ದೇವರಿಗೆ ಪೂಜೆಮಾಡಿ ಹರಸಿಕೊಂಡಿದೀನಿ ಅಂದ್ರೆ

ಪೈ ಪೋ ಟಿ

ಬರೆದವರು :
ಪ್ರಸಾದ್

★

ಮೊದಲ ಮಗ ತನ್ನ ವಾರ್ಷಿಕ ಉಳಿತಾಯದಲ್ಲಿ ಒಂದು ರೇಡಿಯೊ ಕೊಂಡು ತಂದ. ಮೂರು ನಾಲ್ಕು ದಿನ ರಾತ್ರಿ ಮನೆಮಂದಿ ಮಕ್ಕಳೆಲ್ಲಾ ದೊಡ್ಡ ಅಣ್ಣನನ್ನು ಹೊಗಳಿದ್ದೇ ಹೊಗಳಿದ್ದು. ರೇಡಿಯೋ ಕಿವಿ ಹಿಂಡಿ ಕೇಳಬಾರದ್ದನ್ನೆಲ್ಲಾ ಕೇಳಿದ್ದಾಯಿತು. ಟೋಕಿಯೋ, ಮನ್‌ಷನ್, ವೀನ್, ಮಸ್ಕ್ವಾ ಈ ರೀತಿ ಸ್ಟೇಷನ್ನುಗಳು ಅಂತಂತಹ ಊರಿನಲ್ಲಿವೆ ಎಂದು ಆಗಲೇ ನಾನು ಕಲಿತಿದ್ದು. ಕೊನೆ ಹುಡುಗ ಐದು ನಿಮಿಷಕ್ಕೆ ಮೂರು ಸ್ಟೇಷನ್ ತಿರುಗಿಸಿದರೆ, ಕೊನೆ ಮಗಳು ಮೂರು ನಿಮಿಷಕ್ಕೆ ಐದು ಸ್ಟೇಷನ್ ತಿರುಗಿಸುತ್ತಿದ್ದಳು.

ಹಳ್ಳಿಗಾಡಿನ ನಮ್ಮ ಮನೆಗೆ ದೊಡ್ಡ ಕಾಂಪೌಂಡ್ ಇತ್ತು. ಹಾಗಾಗಿ ರಸ್ತೆಯಿಂದ ಮನೆಗೆ ಬರಬೇಕಾದರೆ ೧ ಫರ್ಲಾಂಗ್ ನಡೆದು ಬರಬೇಕಾಗಿತ್ತು. ಆದುದರಿಂದ ರಸ್ತೆಯಲ್ಲಿ ಹೋಗುವವರು ನಮ್ಮನೆಯ ರೇಡಿಯೋದಿಂದ ರೇಗಿ ಮನೆಮೇಲೆ ಕಲ್ಲೆಸೆಯುವ ಅವಕಾಶವಿತ್ತಿಲ್ಲ.

ಎರಡನೆ ಮಗ ಊರಿಂದ ಮನಗೆ ರಜಕ್ಕೆ ಬಂದ. ಹುಡುಗರು ಮಕ್ಕಳು ಅವನನ್ನು ಅಷ್ಟಾಗಿ ಆದರದಿಂದ ಸ್ವಾಗತಿಸಲಿಲ್ಲ. ಚಿಳ್ಳೆಪಿಳ್ಳೆಗಳೆಲ್ಲಾ ಅವನ ಹತ್ತಿರ ಹೋಗಿ " ದೊಡ್ಡಣ್ಣ ರೇಡಿಯೋ ತಂದುಕೊಟ್ಟ. ಏನೇನೆಲ್ಲಾ ಭಾಷೆಗಳು ಅದರಲ್ಲಿ ಕೇಳಿಸುತ್ತೆ. ಎಂತೆಂತ ಹಾಡು ಕೇಳಿಸುತ್ತೆ " ಅಂತೆಲ್ಲಾ ಹೇಳಿ ದೊಡ್ಡಣ್ಣನನ್ನು ಹೊಗಳುತ್ತಿದ್ದುವು. ತಾನು ತಂದ ಬಿಸ್ಕತ್ತು, ಚಾಕಲೇಟು ಎಲ್ಲ ವ್ಯರ್ಥವಾಯಿತಲ್ಲ ಅಂತ ಎರಡನೇ ಮಗ ಸ್ವಲ್ಪ ನೊಂದುಕೊಂಡ. ಆದರೆ ಬೇಗ ಚೇತರಿಸಿಕೊಂಡು ಮಕ್ಕಳು ಮರಿಗಳನ್ನು ಒಲಿಸಿಕೊಳ್ಳುಕ್ಕೆ ಅಂತ ಅವರ ಜತೆ ಆಡುಕ್ಕೆ ಒಂದು ನಾಯಿ ಮರೀನ ಕೊಂಡುತಂದ. " ಅಮ್ಮಾ ! ಮಡಿ ಮೈಲಿಗೆ ಅಂತ ನಾಯಿಮರೀನ ಬೈಯಬೇಡ. ಸ್ವಲ್ಪ ದಿನಗಳಲ್ಲೇ ಬೆಳೆಯುತ್ತೆ. ಜಾತಿ ನಾಯಿ ಅದು. ನಮ್ಮ ದೇಶದ ಸಾಲ ಬೆಳೆದಹಾಗೆ ಬೇಗ ಬೆಳೆಯುತ್ತೆ. ಆಮೇಲೆ ಮನೆ ಕಾಂಪೌಂಡನ್ನೆಲ್ಲಾ ಕಾಯುತ್ತೆ. ದನಕರು ಬರುಕ್ಕೆ ಬಿಡುಲ್ಲ, ಹಾವು ಹಲ್ಲಿ ಇದ್ದರೂ ಹೆದರಿಕೊಂಡು ಓಡಿಹೋಗುತ್ತೆ " ಎಂದೆಲ್ಲಾ ಹೇಳಿ ಅಮ್ಮನನ್ನು ಒಪ್ಪಿಸಿದ.

ನಾಯಿಮರಿ ಬಂದಾಗಿನಿಂದ ಮನೇಲಿ ಎರಡು ಪಂಗಡಗಳಾದುವು. ಹಿಂದಿ ; ಹಿಂದಿಯೇತರ ಅಂದ ಹಾಗೆ. ರೇಡಿಯೋ ಪಕ್ಕಕ್ಕೆ ಇಬ್ಬರು ಚಿಕ್ಕ 'ಹುಡುಗರು, ಇಬ್ಬರು ಮೊಮ್ಮಕ್ಕಳೂ ಸೇರಿಕೊಂಡರು. ನಾಯಿಮರಿ ಪಕ್ಕಕ್ಕೆ ಇಬ್ಬರು ಹುಡುಗಿಯರು

ಮೂರು ಮೊಮ್ಮಕ್ಕಳೂ ಸೇರಿಕೊಂಡರು. " ನಮ್ಮ ರೇಡಿಯೋ ಚೆನ್ನ " ಅಂತ ಆ ಪಕ್ಷ ಜಂಭ ಕೊಚ್ಚಿದರೆ, " ನಮ್ಮ ನಾಯಿ ಮರಿ ಮುಂದೆ ನಿಮ್ಮ ರೇಡಿಯೋ ಏನು ಚೆನ್ನ ನಾಯಿ ಮರಿ ಬಾಲ ಆಡಿಸಿಕೊಂಡು ಓಡಾಡಿದರೆ ಎಷ್ಟು ಚೆನ್ನ " ಅಂತ ನಾಯಿ ಮರಿ ಪಂಗಡದವರು ಎದುರಾಡುತ್ತಿದ್ದರು.

ಒಂದು ತಿಂಗಳಲ್ಲಿ ನಾಯಿ ಮರಿ ಬೆಳೆದು ದೊಡ್ಡ ಗಂಟಲಿನ ನಾಯಾಯ್ತು. ಅದಕ್ಕೂ ಪೈಪೋಟಿಯ ಬಿಸಿ ತಗಲಿರಬೇಕು. ಏಕೆಂದರೆ ರೇಡಿಯೋ ಹಾಕಿದರೆ ನಾಯಿ ಮರೀನೂ ಬೊಗಳುಕ್ಕೆ ಆರಂಭಿಸುತ್ತಿತ್ತು. ರೇಡಿಯೋ ನಿಲ್ಲಿಸಿದರೆ ನಾಯೂ ತೆಪ್ಪಗಾಗುತ್ತಿತ್ತು.

ಕಡೆಕಡೆಗೆ ಏನಾಯ್ತು ಗೊತ್ತೆ ? ನಾಯಿ ಏನಾದರೂ ಬೊಗಳಿದರೆ ರೇಡಿಯೋ ತನಗೆ ತಾನೆ " ಆನ್ " ಆಗಿ ಅದೂ ಬೊಗಳುಕ್ಕೆ ಶುರುಮಾಡುತ್ತಿತ್ತು. ಪೈಪೋಟಿ ಜೋರಾದಮೇಲೆ. ನಾಯಿ ಕುಂಯ್‌ಗುಟ್ಟಿದರೆ ರೇಡಿಯೋನೂ ಕುಯ್‌ಗುಡುತ್ತಿತ್ತು ನಾಯಿ ಗಂಟಲು ಕಟ್ಟಿದ ಹಾಗೆ ಕೆಮ್ಮಿದರೆ ರೇಡಿಯೋನು ಕೆಮ್ಮುತ್ತಿತ್ತು. ಮನೆ ಆಚೆ ನಿಂತವರಿಗೆ ನಾಯಿ ಬೊಗಳುವುದು ಯಾವುದು, ರೇಡಿಯೋ ಬೊಗಳುವುದು ಯಾವುದಂ ಎನ್ನುವುದನ್ನು ಗುರುತಿಸಲು ಆಗುತ್ತಿರಲಿಲ್ಲ.

ಕಡೆಗೊಮ್ಮೆ ನಾಯಿ ಸತ್ತು ಹೋಯಿತು. ಸೇಂದಿ ಲಾರಿ ಕೆಳಗೆ ಸಿಕ್ಕಿಹಾಕಿಕೊಂಡು. ಆದರೆ ರೇಡಿಯೋಗೆ ಆ ಸುದ್ದಿ ತಿಳಿಯಲೇ ಇಲ್ಲ. ಇನ್ನೂ ನಾಯಿ ಬದುಕಿದೆ ಎಂದೋ ಏನೋ ಈವತ್ತಿಗೂ ನಮ್ಮ ರೇಡಿಯೋ ಯಾವ ಸ್ಟೇಷನ್ನಿಗೆ ಯಾವ ಹೊತ್ತಿನಲ್ಲಿ ತಿರುಗಿಸಲಿ ನಾಯಿ ಬೊಗಳಿದ ಹಾಗೆ, ನರಳಿದ ಹಾಗೆ, ಕುಯ್ಗುಟ್ಟ ಹಾಗೆಯೇ ಹೊಡಕೊಳ್ಳುತ್ತೆ. ನಮ್ಮ ರೇಡಿಯೋಗೆ " ಆತ್ಮ " ಇದೆ. ಪೈಪೋಟಿಯೂ ಇದೆ.

ಅರ್ಧ ಬಟ್ಟಲು ಕಾಫಿ

“ ಅರ್ಧ ಬಟ್ಟಲು ಕಾಫಿ ಕೊಡ್ತೀಯಾ ?” ಅಂದ ಶಾಮಣ್ಣ

“ ನಾನು ಕಾಫಿ ಕುಡಿಯುಲ್ಲಮ್ಮ ! ಒಂದು ಬಟ್ಟಲು ನೀರೋ. ನೀರು ಮಜ್ಜಿ ಗೇನೋ ಕೊಟ್ಟರೆ ಸಾಕು ” ಎಂದು ರಾಮಣ್ಣ ಹೇಳಿದ.

“ ಹಾಲಿನವಳು ಬೇಗನೇ ಬಂದಳು. ಕಾಫೀಗೆ ಏನು ಕಷ್ಟ, ಈಗಲೆ ಮಾಡಿ ತರ್‍ತೀನಿ ” ಎಂದು ಹೇಳಿ ಸುಬ್ಬಮ್ಮ ಅಡಿಗೆ ಮನೆಗೆ ಹೋದಳು,

ಸಂಜೆ ೫ ೨೦ ಆಗಿತ್ತು, ರಾಮಣ್ಣ ಶಾಮಣ್ಣನ ಮನೆಗೆ ಬಂದಾಗ. ಮನೆಯಾಕೆ ತೌರಿಗೆ ಹೋದ ಕಾರಣ, ಮನೇಲಿ ಬೇಜಾರು ಬಂದಿದುದರಿಂಧ ಸ್ನೇಹಿತನ ಮನೇಲಿ ಸ್ವಲ್ಪ ರಹಟೆ ಹೊಡೆದು ಹೋಗೋಣ ಅಂತ ಬಂದಿದ್ದ. ಮನೇಲಿ ಕಾಫಿ ಹೇಗೂ ಇಲ್ಲ ಅಂತ ಶಾಮಣ್ಣನ ಹೆಂಡತಿಗೂ ತಿಳಿದ ವಿಷಯವೇ ಆದ್ದರಿಂದ, ಈ ಹೊತ್ತಿನಲ್ಲಿ ಕಾಫೀಗೆ ಅಂತಲೇ ಬಂದ ಅಂತ ಆಕೆ ಏನಾದರೂ ಅನುಮಾನ ಪಟ್ಟರೆ ? ಅನ್ನಿಸಿತ್ತು ರಾಮಣ್ಣನಿಗೆ. ಅದಕ್ಕೆ ಅವನು ಕಾಫಿ ಬೇಡ ನೀರು ಸಾಕು ಎಂದು ಹೇಳಿದ್ದ.

ಅಡಿಗೆ ಮನೆ ಕಡೆಯತ್ತ ಸುಬ್ಬಮ್ಮ ಹೋದ ಕೂಡಲೇ ಶಾಮಣ್ಣ ಶುರು ಮಾಡಿದ, “ ಈ ಹೆಂಗಸರ ಹಣೆಯ ಬರಹವೇ ಇಷ್ಟು; ಹೇಳಿದಷ್ಟು ಮಾಡೋದಿಲ್ಲ ಎಲ್ಲದರಲ್ಲಿಯೂ ದುಂದು. ಈಗ ನೋಡಪ್ಪಾ ಅರ್ಧ ಬಟ್ಟಲು ಕಾಫಿ ಕೊಡ್ತೀಯಾ ಅಂತ ಕೇಳಿದೆ, ಬಟ್ಟಲು ತುಂಬಾ ಹೂಯ್ದುಕೊಂಡು ಬರ್‍ತಾಳೆ ನೋಡು. ಸುತ್ತಲೂ ಚೆಲ್ಲದೆ ಇರುವ ಹಾಗೆ. ಆ ಬಟ್ಟಲನ್ನು ಎತ್ತುವುದಕ್ಕೆ ಆಗುವುದೇ ಇಲ್ಲ. ” ಎಂದು ಹೇಳುತ್ತಿದ್ದಹಾಗೆ.

ಸುಬ್ಬಮ್ಮ ಎರಡು ಬಟ್ಟಲು ಕಾಫಿ ಮಾಡಿ ಇಬ್ಬರೆದುರಿನ-ಕೈ ಮೇಜಿನಮೇಲೆ ಇಟ್ಟಳು. “ ಒಂದು ಬಟ್ಟಲು ಕಾಫಿ ಕುಡಿದರೆ ಮೈಗೆ ಏನೂ ಆಗುಲ್ಲ, ಕುಡೀರಿ. ನೆಸ್ಕೆಫೆ ಇದು. ಹಾಲಿನಲ್ಲೇ ಮಾಡಿದ್ದೀನಿ ” ಎಂದು ರಾಮಣ್ಣನ ಕಡೆ ನೋಡುತ್ತ ಹೇಳಿದಳು. ತನ್ನ ನಿಟ್ಟಿಂಗ್ ಮುಂದುವರಿಸಿದಳು.

“ ನಾನು ಹೇಳಿದ್ದು ದಿಟ ಅಲ್ಲವೇ ರಾಮು” ಅಂತ ಶುರುಮಾಡಿದ ಶಾಮಣ್ಣ.

“ ಅರ್ಧ ಬಟ್ಟಲು ಕಾಫಿ ಕೊಡು ಅಂದರೆ ಲೋಟ ತುಳುಕೋ ಹಾಗೆ ತುಂಬಿ ಕೊಂಡು ತಂದಿದ್ದಾಳೆ. ಹೆಂಗಸರ ಹಣೆಬರಹವೇ ಇಷ್ಟು. ಮಧ್ಯಾಹ್ನ ಆಫೀಸಿಂದ

ಹಿಂತಿರುಗುವ ಮುನ್ನ ೪ ಗಂಟೆಗೆ ಕಾಫಿ ಕುಡಿದಿದ್ದ. ಈಗ ಬಾಯಿ ಮುಲ ಮುಲ ಅಂತು. ಒಂದು ಅರ್ಧ ಬಟ್ಟಲು ಕುಡಿಯೋಣ ಅನ್ನಿಸಿತು. ಕೇಳಿದರೆ ನೋಡಂ! ನಾವು ಹೇಳಿದ್ದು ಈ ಹೆಂಗಸರಿಗೆ ಕೇಳಿಸೋದೇ ಇಲ್ಲವೇನೋ ? ಅಥವಾ ಕಾಫಿ ಡಿಕಾಕ್ಷನ್ ಬಗ್ಗಿಸೋವಾಗ ಅವರಿಗೆ ಅಮಲೇರಿ ಪೂರ್ತಿ ಸುರಿಯೋ ತನಕ ಮನಸ್ಸು ಶಾಂತಿಯಾಗುಲ್ಲವೇನೋ ಅಥವಾ ರುಚಿಯಾಗಿದೆ, ಇನ್ನೊಂದರ್ಧ ಬಟ್ಟಲು ಕೊಡ್ತೀಯಾ ಅಂತ ಕೇಳ್ತೀವಿ ಆಗ ತಿರುಗಿ ಹೋಗಿ ಮಾಡಬೇಕಾಗುತ್ತೆ ಅಂತ ಊಹಿಸಿ ಹೀಗೆ ಮಾಡ್ತಾರೋ ? ಅಥವಾ ದನಗಳಿಗೆ ಕಲಗಚ್ಚು ಹಾಕೋವಾಗ ಧಾರಾಳವಾಗಿ ಸುರಿಯೋ ಹಾಗೆ ನಮಗೂ ಸುರೀಬೇಕು ಅಂತ ಆಳಮನಸ್ಸಿನಲ್ಲಿ ಇವರಿಗೆ ಅನ್ನಿಸುತ್ತೇನೋ ?"

ಎಂದು ವಿವರವಾಗಿ ವಿಶದೀಕರಿಸುವುದಕ್ಕೆ ಶುರುಮಾಡಿದ.

" ಕಾಫಿ ತಣ್ಣಗಾಗಿ ಹೋಗುತ್ತೆ. ಮೊದಲು ಸುರಕೊಳ್ಳಿ. ಆಮೇಲೆ ಮಾತ ನಾಡುಕ್ಕೆ ಗಂಟಲಿಗೆ ಶಕ್ತಿ ಬರುತ್ತೆ " ಎಂದರು ಸುಬ್ಬಮ್ಮ.

ಬೇಗ ಬೇಗ ರಾಮಣ್ಣ ಕಾಫಿ ಕುಡಿದ. ಶಾಮಣ್ಣ ಇನ್ನೂ ಮಾತನಾಡುಕ್ಕೆ ಹವಣಿಸುತ್ತಿದ್ದ. ಏನು ಅನ್ನಲಿ ಎಂದು ಯೋಚಿಸುತ್ತಿದ್ದಿರಬೇಕು. ಸ್ವಲ್ಪ ವಿಳಂಬ ಮಾಡಿದರೆ ಸುಬ್ಬಮ್ಮ ಏನಾದರೂ ಅಂತಾರೇನೋ ಅಂತ ಭಯ ರಾಮಣ್ಣನಿಗೆ. ಮದುವೆಯಾದ ಗಂಡ ಹೆಂಡತಿ ಕೈಲಿ ಬೈಸಿಕೊಳ್ಳುವುದು ಸಹಜ. ತಾಳಿ ಕಟ್ಟಿದ ಪಾಪಕ್ಕೆ ಅದು ಪ್ರಾಯಶ್ಚಿತ್ತ. ಆದರೆ ತಾನ್ಯಾಕೆ ಇನ್ನೊಬ್ಬರ ಹೆಂಡತಿ ಕೈಲಿ ಬೈಯ್ಯಿಸಿಕೊಳ್ಳಬೇಕು ? ಎಂದು ರಾಮಣ್ಣನ ಚಿಂತನೆ. ಕಾರಣ ಬೇಗ ಕಾಫಿ ಕುಡಿದು ಮುಗಿಸಿ, ತುಟಿ ಒರೆಸಿಕೊಂಡ,

" ಹೆಂಗಸರು ಏನನ್ನೇ ಬಡಿಸಲಿ, ಹೀಗೇನೆ! ಒಂದು ಸೌಟು ಹೆಚ್ಚಾಗೆ ಬಡಿಸೋ ದುರಭ್ಯಾಸ. ಆದಕ್ಕೆ ಇರಬೇಕು ಮಹಾವಿಷ್ಣು ಕ್ಷೀರಸಾಗರದಲ್ಲೇ ಹಾಸಿಗೆ ಹಾಸಿ ಕೊಂಡುಬಿಟ್ಟ. ಆವಾಗ ಕಾಫಿ ಇರಲಿಲ್ಲ. ಕೆಂಪು ಕಲ್ಲುಸಕ್ಕರೆ ನೊರೆಹಾಲಿಗೆ ಬೆರಸಿ ಕೆನೆ ಬರೋಹಾಗೆ ಕಾಯಿಸಿ ಗಂಡನಿಗೆ ಹೆಂಡತಿಯರು ಕೊಡುತ್ತಿದ್ದರು. ವಿಷ್ಣುವಿಗೂ ಕೇಳಿದ್ದಕ್ಕಿಂತ ಹೆಚ್ಚು ಹಾಲು ಕೊಡುವ ಲಕ್ಷ್ಮಿಯನ್ನು ಕಂಡು ಬೇಜಾರು ಬಂದಿರ ಬೇಕು. ಅದಕ್ಕೇ ಹಾಲಿನ ಸಮುದ್ರದಲ್ಲೇ ಮಲಗಿದರೆ ಆಗ ಲಕ್ಷ್ಮಿಯ ಈ ಉಪ ಚಾರಕ್ಕೆ ತುಂಡುಹಾಕಿದ ಹಾಗೆ ಆಗುತ್ತಲ್ಲ! ಎಂದು ಯೋಚನೆ ಮಾಡಿ ಆತ ಹಾಸಿಗೇನ ಅಲ್ಲಿ ಹಾಕಿರಬೇಕು," ಎಂದೆಲ್ಲಾ ರಾಮಣ್ಣ ಹೇಳುತ್ತಲೇ ಇದ್ದಾನೆ.

ಸುಬ್ಬಮ್ಮ ಎದ್ದಳು " ರಾತ್ರಿ ಎಂಟುಗಂಟೆ ಹೊತ್ತಿಗೆ ಸಾತಕ್ಕನ ಮನೆಗೆ ಬನ್ನಿ. ಸಾತಕ್ಕನ ಮಗಳಿಗೆ ಎಂ. ಎಸ್. ಸಿ ಪ್ಯಾಸಾಯಿತಂತೆ. ಗಂಡೂ ಗೊತ್ತಾಗಿದೆಯಂತೆ. ಅವಳ ಸ್ನೇಹಿತ ಸ್ನೇಹಿತೆಯರಿಗೆ ಟೀ ಪಾರ್ಟಿ ಈ ಸಂಜೆ ಬಂದು ಸ್ವಲ್ಪ ಸಹಾಯ ಮಾಡ್ತೀಯಾ ಅಂತ ಸಾತಕ್ಕ ಕೇಳಿದಳು, ಆದಕ್ಕೇ ಈಗ ಹೋಗ್ತಾ ಇದ್ದೀನಿ.

ಸಾತಕ್ಕ ಆಕೆಯ ಗಂಡನನ್ನೋ ಮಗನನ್ನೋ ನನ್ನ ಜತೆಗೆ ಕಳಿಸಬೇಕಾಗುತ್ತದೆ, ನಾನು ಹಿಂತಿರುವಾಗ. ನೀವೇ ಬಂದರೆ ಸಾತಕ್ಕನಿಗೆ ಈ ಕಷ್ಟ ತಪ್ಪುತ್ತೆ ಎಂದು ಹೇಳಿ ನಿಟ್ಟಿಂಗ್ ಸಾಮಾನನ್ನು ತೆಗೆದಿರಿಸಿ. ಒಳಗೆ ಹೋಗಿ ಅರೆಕ್ಷಣದಲ್ಲಿ ಮಾಯಾ ಮಂತ್ರ ಮಾಡಿದಂತೆ ಹೊಸ ಸೀರೆ ಉಟ್ಟುಕೊಂಡು, ಬಂದು, "ಮರೀಬೇಡಿ, ಕಾಡ ಹರಟೇಲಿ, ರಾತ್ರಿ ಎಂಟಕ್ಕೆ ಬಂದು ಬಿಡಿ" ಎಂದು ಹುಕುಂ ಕೊಟ್ಟು ಪತಂಗ ಹಾರಿದ ಹಾಗೆ ಸೆರಗು ಹಾರಿಸುತ್ತ ಹೊರಟೇ ಹೋದಳು.

"ಎಷ್ಟೇ ಬುದ್ಧಿವಾದ ಹೇಳಲಿ, ಈ ಹೆಂಗಸರ ತಲೆಗೆ ಹಿಡಿಸೋದೇ ಇಲ್ಲ." ಎಂದ ಶಾಮಣ್ಣ, ಸುಬ್ಬಮ್ಮ ಹೋದ ಹಾದಿಯನ್ನೇ ನೋಡುತ್ತ.

"ನೋಡು ಶಾಮಣ್ಣ. ಈ ತಹಲ್‌ವರೆಗೆ ಹೆಂಗಸರಿಗೆ ಬುದ್ಧಿ ಕಲಿಸಿದ ಗಂಡು ಇನ್ನೂ ಹುಟ್ಟಿಲ್ಲ. ಅಂದಮೇಲೆ ನಿನಗೆ ನನಗೆ ಯಾಕೆ ಆದರ ಗೋಜು. ನಮ್ಮನೇಲಿ ಯಾರೂ ಇಲ್ಲ. ನಮ್ಮ ಡಾಕ್ಟರು ಜೀರ್ಣಶಕ್ತಿ ನಿಮಗೆ ಕೊಟ್ಟಿದೆ. ಈ ಟಾನಿಕ್ ತೆಗೊಳ್ಳಿ ಅಂತ ಏನನ್ನೋ ಬರೆದು ಕೊಟ್ಟಿದ್ದರು.

ಪುಟಾಣಿ ಶೀಷಗೆ ಮೂವತ್ತು ರೂಪಾಯಿ. ಅರ್ಧ ಸೌಟಿನಷ್ಟು ಒಂದು ದಿನ ಎಳನೀರು ಬೆರೆಸಿಕೊಂಡು ಕುಡಿದೆ. ಭರ್ಜರಿ ಹಶಿವಾಯ್ತು. ಅರ್ಧ ಶೀಷಿ ಇನ್ನೂ ಉಳಿದಿದೆ. ಬೇಗ ನಮ್ಮನೆಗೆ ಹೋಗೋಣ. ಆ ಟಾನಿಕ್‌ಅನ್ನ ಇಬ್ಬರೂ ಮುಗಿಸೋಣ, ಆಮೇಲೆ ಸಾತಕ್ಕನ ಮನೆಗೆ ಹೋಗ್ತಾ ಆ ಶೀಷೇನ ಮುನಿಸಿಪಾಲಿಟಿ ಡಬ್ಬದಲ್ಲಿ ಹಾಕಿಬಿಡೋಣ. ನೀನು ಹೆಂಡತೀನ ಕರಕೊಂಡು ಹಿಂತಿರುಗು. ನಾನೂ ಬೀಳ್ಕೊಟ್ಟು ಹೋಟಲಿಗೆ ಊಟಕ್ಕೆ ಹೋಗ್ತೀನಿ" ಎಂದ ರಾಮಣ್ಣ.

ಸರಿ. ಇಬ್ಬರೂ ರಾಮಣ್ಣನ ಮನೆಗೆ ಹೋದರು. ಉಳಿದಿದ್ದ ಅರ್ಧ ಶೀಷೆ ಟಾನಿಕ್ ಅನ್ನ ಮೂರು ಮೂರು ಗುಟುಕಿನಲ್ಲಿ ಮುಗಿಸಿದರು. ಹಳೇ ಪತ್ರಿಕೇಲಿ ಶೀಷೇನ ಮುಚ್ಚಿ. ಸಾತಕ್ಕನ ಮನೆ ಕಡೆಗೆ ಹೊರಟರು.

ಸಾತಕ್ಕನ ಮನೇಲಿ ಆಗ ತಾನೆ ಟೀಪಾರ್ಟಿ ಮುಗಿದಿತ್ತು. ಎಲ್ಲರೂ ಹೊರಟು ಹೋಗಿದ್ದರು. ವರಾಂಡದಲ್ಲೇ ಸಾತಕ್ಕ, ಅವಳ ಗಂಡ, ಸಾತಕ್ಕನ ಮಗಳು, ಸುಬ್ಬಮ್ಮ ನಿಂತಿದ್ದರು.

ರಾಮಣ್ಣ ಶಾಮಣ್ಣ ಬಂದಾಗ. "ಏನ್ರೀ! ಎಂಟು ಗಂಟೆಗೆ ಬನ್ನಿ ಅಂದರೆ, ಎಂಟೂಕಾಲಿಗೆ ಬರೋದೇ" ಎಂದಳು ಸುಬ್ಬಮ್ಮ.

"ಬರೋದು ಬಂದಿದ್ದಾರೆ, ಏನಾರು ತೆಗೊಂಡುಹೋಗಲಿ, ಸುಬ್ಬಿ" ಅಂತ ಸಾತಕ್ಕ ಅಂದಳು.

"ನಡಕೊಂಡು ಬಂದಿದೀರಿ, ಬೆವರಿ ಕೆಂಚೇರಿದ್ದೀರಿ. ಸ್ವಲ್ಪ ಸುಧಾರಿಸಿಕೊಂಡು ಹೋಗೋರಂತೆ, ಕೂತುಕೊಳ್ಳಿ" ಎಂದರು ಸಾತಕ್ಕನ ಗಂಡ.

" ಏನು ತಂದುಕೊಡಲಿ " ಅಂದಳು ಸಾತಕ್ಕನ ಮಗಳು.

" ಅರ್ಧ ಬಟ್ಟಲು ಕಾಫಿ " ಎಂದ ಶಾಮಣ್ಣ.

" ತಿನ್ನುಕ್ಕೆ ಏನೂ ಬೇಡ " ಅಂದ ರಾಮಣ್ಣ.

ಎಲ್ಲರೂ ಹಜಾರದೊಳಕ್ಕೆ ಹೋಗಿ ಕುಳಿತುಕೊಂಡರು. ರಾಮಣ್ಣ, ಶಾಮಣ್ಣ ಇಬ್ಬರೂ ಆಗಿಂದಾಗ್ಗೆ ಟಾನಿಕ್ ಕುಡಿದಿದ್ದರಿಂದಲೇ ಏನೋ, ಬೆವರೊರೆಸಿಕೊಳ್ಳು ತ್ತಿದ್ದರು. ಸಾತಕ್ಕನ ಮಗಳು ಎರಡು ಬಟ್ಟಲುಗಳಲ್ಲಿ ಕಾಫಿ ಹಾಕಿ, ತಟ್ಟೆಯಲ್ಲಿಟ್ಟು ಕೊಂಡು ತಂದು, ಇವರಿಬ್ಬರ ಎದುರಿನಲ್ಲಿ ಇಟ್ಟಳು.

ಶಾಮಣ್ಣ ಕಾಫಿ ಬಟ್ಟಲುಗಳನ್ನು ನೋಡಿದ. ಅರ್ಧ ಬಟ್ಟಲು ಕಾಫಿ, ಗೆರೆ ಹಾಕಿ ತುಂಬಿದಂತೆ ಅರ್ಧಬಟ್ಟಲು ಮಾತ್ರ.

ಮಂತ್ರ ಮುಗ್ಧನಾದಂತೆ ಶಾಮಣ್ಣ ಎದ್ದು ನಿಂತ.

"ತಾಯೀ ! ಅನಾದಿ ಕಾಲದಿಂದ ಈ ತನಕ ಯಾವ ಹೆಣ್ಣುಕೂಡ ಕೇಳಿದಷ್ಟನ್ನು ಬಡಿಸಿದ ನಿದರ್ಶನವಿಲ್ಲ. ಪರಿಸ್ಥಿತಿ ಹೀಗಿರುವಾಗಿ "ಯಥಾ ಇಚ್ಛಾ" ಯಥೇಚ್ಛವಾಗಿ ನೀನು ಕೇಳಿದಷ್ಟು ಕಾಫಿ ತಂದು ಕೊಟ್ಟಿರುವಿ ನಿನಗೆ ಮಂಗಳವಾಗಲಿ, ನಿನ್ನ ಸಂತಾನಾಭಿವೃದ್ಧಿಯಾಗಲಿ. ಬರೀ ಹೆಣ್ಣುಮಕ್ಕಳೇ ನಿನಗಾಗಲಿ. ಅವರೆಲ್ಲ ನಿನ್ನಂತೆಯೇ ಗಂಡು ಕೇಳಿದಷ್ಟು ಬಡಿಸುವ ವಿದ್ಯೆಯನ್ನು ಕಲಿತು ಈ ಹೊಸ ಪರಂಪರೆಯನ್ನು ಮುಂದುವರಿಸಲಿ,

ಇನ್ನೂ ಏನು ಏನನ್ನೋ ಹೇಳಬೇಕೆಂದಿದ್ದ. ಅಷ್ಟರಲ್ಲೇ ಸಾತಕ್ಕನ ಮಗಳು ಅಡ್ಡಮಾತನಾಡಿ, " ಒಂದೇ ಬಟ್ಟಲು ಕಾಫಿ ಉಳಿದಿತ್ತು. ಸಮ ಸಮ ಹಂಚಿ, ಇಬ್ಬರಿಗೂ ತಂದಕೊಟ್ಟೆ" ಎಂದಳು.

* * * *

ಹಿಂತಿರುಗಿ ಬರುತ್ತಿದ್ದಾಗ, ರಸ್ತೆಯಲ್ಲೇ ಸುಬ್ಬಮ್ಮ ತರಾಟೆಗೆ ತೆಗೆದುಕೊಂಡಳು. " ಎಲ್ಲಿ ಹೋಗಿ, ಏನು ಕುಡಿದುಕೊಂಡು ಬಂದಿದ್ದಿರಿ, ಇಬ್ಬರೂನು : ತಲೆಯೇ ಇಲ್ಲಾ ಮಾತನಾಡುತ್ತಿದ್ದಿರಿ, ಅರ್ಧ ಬಟ್ಟಲು ಕಾಫಿಯಂತೆ, ಕಾಫಿ " ಅಂತ.

ಮೆಲ್ಲಗೆ ರಾಮಣ್ಣ ನುಸುಳಿಕೊಂಡು ಹೋಟಲಿನತ್ತ ನಡೆದ. ಶಾಮಣ್ಣ ಒಬ್ಬನೇ ಸಿಕ್ಕಿಹಾಕಿಕೊಂಡ, ಸುಬ್ಬಮ್ಮನ ನಾಲಿಗೆ ಚಾವಟಿ ಏಟಿಗೆ.

ಆ ಕ್ಯೂಗಿಂತ ಈ ಕ್ಯೂ ವಾಸಿ

ನನ್ನ ಮುಂದೆ ಕ್ಯೂನಲ್ಲಿ ನಿಂತಿದ್ದವ ಆರಡಿ ಎತ್ತರದ ಸೈಂಧವ. ಬಲಗೈಯಲ್ಲಿ ದೊಡ್ಡ ಮಚ್ಚುಗತ್ತಿ ಹಿಡಿದಿದ್ದ. ಬಲ ಭುಜದ ಮೇಲೆ ಚೀಲವನ್ನು, ಭುಜಕೀರ್ತಿಯಂತೆ ಧರಿಸಿದ್ದ. ಅರ್ಧ ಗಂಟೆ ಆಯಿತು. ಒಂದು ಗಂಟೆ ಮುಗಿಯಿತು, ಕ್ಯೂ ಮಾತ್ರ ಒಂದು ಸೆಂಟಿ ಮೀಟರ್ ಮುಂದೆ ಸಾಗಿತ್ತು. ಮುಂದೆ ನಿಂತಿದ್ದ ಸೈಂಧವನ ತಾಳ್ಮೆ ಮೀರಿತೇನೋ ? ಅಥವಾ ಹಠಾತ್ತಾಗಿ ಹುಚ್ಚು ಹಿಡಿಯಿತೇನೋ ? "ಜೈ ? ಕಾಳಿ" ಅಂತ ಒಮ್ಮೆ ಬೊಬ್ಬೆ ಹಾಕಿದ. ಆ ರಭಸಕ್ಕೆ ಭುಜದ ಮೇಲಿನ ಚೀಲ ಭರತನಾಟ್ಯ ಆಡಿತು.

"ಇವರು ಕೊಡೋ ಅಕ್ಕಳ್ಕು ಅಕ್ಕಿಗೆ ಇಷ್ಟು ಹೊತ್ತು ಕಾದರೂ ಸರದಿ ಬರಲೇ ಇಲ್ಲ! ಹಾಳಾಗಿ ಹೋಗಲಿ, ಈ ಕ್ಷಣ ಹೋಗಿ ಇದನ್ನೆಲ್ಲಾ ಇಷ್ಟು ಅವ್ಯವಸ್ಥೆ ಮಾಡಿದ ಆ. ಆ, ಆಹಾರ ಸಚಿವರ ತಲೆ ಹಾರಿಸಿ ಬಿಡ್ತೀನೆ"

ಎಂದೆಲ್ಲಾ ಕೂಗುತ್ತ ಭೂತ ಹಿಡಿದವರಂತೆ ಆಹಾರ ಸಚಿವರ ಮನೆಯ ಕಡೆಗೆ ಓಡಿಬಿಟ್ಟ.

ಅವನ ಕೈಯಲ್ಲಿದ್ದ ಮಚ್ಚುಗತ್ತಿಯನ್ನು ಕಂಡು, ಅವನ ದೇಹರಚನೆಯನ್ನು ನೋಡಿದ, ನನಗೆ ಸಂಜೆ ಪತ್ರಿಕೆಯಲ್ಲಿ ಭೀಕರ ಕೊಲೆಯ ಸುದ್ದಿ ಬಂದೇ ಇರುತ್ತೆ ಎಂದೆನ್ನಿಸಿತು.

ನಾಲ್ಕು ಗಂಟೆಗಳಾಗಿರಬಹುದು. ಪೂರ್ಥಾರಿ ಹಿಂದಿನ ಮಾತ್ರಿ ತರಹ ತಲೆ ಬಗ್ಗಿಸಿಕೊಂಡು ಸೈಂಧವ ಹಿಂತಿರುಗಿದ. ನನ್ನ ಮುಂದೆ ಬಂದು ಮೊದಲಿನಂತೆಯೇ ನಿಂತ, ತನ್ನ ಹಳೆಯ ಕ್ಯೂ ಸ್ಥಾನದಲ್ಲಿ. ಕ್ಯೂ ಇದ್ದಹಾಗೇ ಇತ್ತು. ಒಂದು ಅಡಿ ಮುಂದೆ ಸಾಗಿದ್ದಿರಬಹುದು.

"ಏನಯ್ಯಾ! ಆಹಾರ ಸಚಿವರನ್ನು ಮುಗಿಸಿಬಿಟ್ಟು ಬಂದೆಯಾ ?" ಎಂದು ಮೆದುವಾಗಿ ಕೇಳಿದೆ

"ಆಹಾರ ಸಚಿವರನ್ನು ಕೊಲೆ ಮಾಡಲು ಕಾದು ನಿಂತಿರುವ ಜನರ ಕ್ಯೂ ಅಕ್ಕಳ್ಕು ಅಕ್ಕಿಯ ಈ ಕ್ಯೂ ಗಿಂತ ಉದ್ದವಾಗಿದೆ. ಆದಕ್ಕೇ ಬೇಜಾರಾಯಿತು. ಅಲ್ಲಿ ಕಾಯೋದಕ್ಕಿಂತ ಇಲ್ಲಿ ಕಾಯೋದು ಲೇಸು ಅನ್ನಿಸಿತು" ಎಂದ.

— ಕುಮಾರ್

ಸರಸು ಸ್ವಯಂವರ

ಪುಢಾರಿ ವೆಂಕಟಪ್ಪನ ಮಗಳು ಸರಸು. ಅಂದಮೇಲೆ ಐಶ್ವರ್ಯವಂತೆ ಅಂತ ಹೇಳಬೇಕೆ ? ಕಡಲತೀರದ ಚೆಂದುಳ್ಳಿ ಶಾಲಾ ಮಾಸ್ತರಿಣಿಯನ್ನು ವೆಂಕಟಪ್ಪ ಶ್ರೀಮಂತನಾದಮೇಲೆ ಮದುವೆಯಾದ ಅಂದಮೇಲೆ ಸರಸು ರೂಪವಂತೆ ಅಂತ ಕೇಳಬೇಕೇ ? ಕಾಲೇಜಿನಲ್ಲಿ ಓದುತ್ತಿದ್ದ ಸರಸು ೮-೧೦ ಚಿನ್ನದ ಪದಕಗಳನ್ನು ಪಡೆದಿದ್ದಳು ಅಂದಮೇಲೆ ಜಾಣೆ ಅಂತ ಬೇರೆ ಹೇಳಬೇಕೇ ? ೨೨ರ ಸರಸು ಇಂದ್ರನ ಒಡ್ಡೋಲಗಕ್ಕೆ ಲಾಯಕ್ಕು ಅಂತ ಜನ ಅಂದು ಆಡುವುದರಲ್ಲಿ ಸತ್ಯವೇ ಇತ್ತು.

ನವರಾತ್ರಿ ಬೊಂಬೆ ಕೂಡಿಸುವಾಗ, ಸರಸು ಪುಟ್ಟ ಮನೆ ಕಟ್ಟಿದರೆ, ಅದರ ಹಿತ್ತಿಲ ಬಾಗಿಲಿಗೆ ಮುತ್ತಿನ ಚಪ್ಪರ ಹಾಕುತ್ತಿದ್ದಳು. ಮನೆಮುಂದೆ ನಿಲ್ಲಿಸಿದ ಗಾಜಿನ ನಾಯಿನ ಬೆರಳುಗಳಿಗೆ ಉಂಗುರ ಕಗ್ಗುರ ಹಾಕುತ್ತಿದ್ದಳು. ಸರಸ್ವತಿ ಪೂಜೆ ಮಾಡುವಾಗ ತನ್ನ ಸ್ವಂತ ಚೆಕ್ ಬುಕ್ ಅನ್ನೇ ಇಟ್ಟು ಪೂಜಿಸುತ್ತಿದ್ದಳು. ಅರಬ್ಬೀಷೇಕರು ಅಂತಃಪುರದಲ್ಲಿ ನೂರಾರು ಪತ್ನಿಯರನ್ನಿಟ್ಟುಕೊಂಡಿರುತ್ತಿರಲಿಲ್ಲವೇ ? ಅದಕ್ಕಿಂತ ಹೆಚ್ಚು ಸಂಖ್ಯೆಯಲ್ಲಿ ಸೀರೆ, ಚೋಳಿ, ಬ್ಲೌಸು, ಜೀನ್ಸ್‌ಗಳನ್ನು ಗಾಜಿನ ಬೀರುವಿನಲ್ಲಿಟ್ಟಿದ್ದಳು. ಅವಳ ಆಧಾರದ ಉಡುಪುಗಳನ್ನು ದಿನಾಲೂ ಬೆಳಿಗ್ಗೆ ಒಗೆದು ಹರವು ಹಾಕಬೇಕಾದರೆ, ಹತ್ತು ಗಜ ಉದ್ದವಿದ್ದ ಹಗ್ಗವನ್ನೇ ಕಟ್ಟುತ್ತಿದ್ದರು. ಅಂತಹ ಹುಟ್ಟು ಶ್ರೀಮಂತೆ.

ಅಂದಮೇಲೆ ಅವಳು ಬಯಸಿದ್ದನ್ನು ಅವರಪ್ಪ ತಂದು ಕೊಡುತ್ತಿದ್ದ. ಒಬ್ಬಳೇ ರಾಜಕುಮಾರಿಗೆ ಹಿಂದಿನ ಕಾಲದ ರಾಜ ಏನೇನು ಸೌಭಾಗ್ಯ ಒದಗಿಸುತ್ತಿದ್ದನೋ ಅದಕ್ಕಿಂತ ನೂರರಷ್ಟು ಹೆಚ್ಚು ಪಾಲು ಪುಢಾರಿ ತನ್ನ ಮಗಳಿಗೆ ಒದಗಿಸಲು ಸುಲಭ ಸಾಧ್ಯವಾಯಿತು.

ಕಾಲೇಜಿಂದ ಒಂದು ಸಂಜೆ ಹಿಂತಿರುಗಿದಾಗ, ಗೇಟಿನ ಬಳಿಯಲ್ಲಿ "ಟಾಟಾಜಿಮ್ಮಿ ಡ್ರ್ಯಾಯವರ್ ಜಿಮ್ಮಿನ ಅವರ ಮನೆ ಹತ್ತಿರ ಬಿಟ್ಟು ಬಾ" ಎಂದು ಹೇಳಿದ್ದು. ಪುಢಾರಿಗೆ ಕೇಳಿಸಿತು. ಹಜಾರದೊಳಕ್ಕೆ ಬಂದಾಗ ಸರಸು ಮುಖ ಕೆಂಪಡರಿ ಖುಷಿಯಿಂದ ಅರುಣೋದಯದಂತೆ ಪುಢಾರೀಗೆ ಕಾಣಿಸಿತು. ಅವಳನ್ನು ನೋಡಿದ ಒಂದು ಕ್ಷಣ. ೨೩ ವರ್ಷಗಳ ಹಿಂದೆ ಕಡಲ ತೀರದ ಊರಿಗೆ ಹೋಗಿದ್ದಾಗ ಶಾಲಾ ಮಾಸ್ತರಿಣಿ

ಕಡಲ ಸ್ನಾನ ಮಾಡುತ್ತಿದ್ದುದನ್ನು ಕಂಡಾಗ ಯಾವರೀತಿ ಉಲ್ಲಸಿತನಾಗಿದ್ದನೋ ಹಾಗೇ ಆಗಿದ್ದ ಈಗ. "ಅಮ್ಮನ ಅಚ್ಚೇ ಇವಳು. ಬೇಗ ಮದುವೆಮಾಡಿ ಭದ್ರ ಮಾಡಬೇಕು" ಅಂತ ಅನ್ನಿಸಿತು. ಇಲ್ಲದೆ ಇದ್ದರೆ ಯಾರಾದರೂ ಸಚಿವರ ನಾಲಾಯಕ್ಕು ಮಕ್ಕಳು ಕಣ್ಣು ಹಾಕಿದರೆ, ಬೇಡ ಅನ್ನುವ ಹಾಗೂ ಇಲ್ಲ, ಹ್ಞೂ ಅನ್ನುವ ಹಾಗೂ ಇಲ್ಲ, ತುಂಬಾ ತೊಂಚಾವಂಚಕ್ಕೆ ಸಿಕ್ಕಿಕೊಳ್ಳಬೇಕಾಗುತ್ತದೆ ಎಂದು ಯೋಚಿಸಿದ.

ಕಾರಣ. ಊಟಕ್ಕೆ ಕುಳಿತಾಗ "ಸರಸು, ನಿನ್ನ ಪರೀಕ್ಷೆ ಮುಗಿದಿದೆ. ಪ್ರಾಯ ಸರಿಯಾಗಿದೆ. ಆದ್ದರಿಂದ ನಿನ್ನ ಮದುವೆ ಮಾಡಬೇಕು ಅಂತ ನನ್ನ ಇರಾದೆ. ಇಂತಹವರನ್ನು ಅಂತಹವರನ್ನು ಮದುವೆಯಾಗು ಅಂತ ನಾನು ಜಬರ್ದಸ್ತಿ ಮಾಡುಲ್ಲ. ನೀನೇ ವರನನ್ನು ಆರಿಸು. ಮದುವೆ ನಾನು ಮಾಡ್ತೇನೆ" ಎಂದ.

"ಅಂದರೆ ಸ್ವಯಂವರ ಏರ್ಪಡಿಸ್ತೀಯಾ ಅಪ್ಪ? " ಎಂದಳು ಸರಸು. "ಹಾಗೆ ಮಾಡು ಅಂದರೆ ಅದನ್ನು ಏರ್ಪಡಿಸ್ತೀನಿ" ಎಂದ ಅಪ್ಪ.

"ಮುಂದಿನ ತಿಂಗಳು ಪೌರ್ಣಮಿ ರಾತ್ರಿ ನಮ್ಮನೆಯಲ್ಲಿ ಒಂದು ವನ ಭೋಜನ ಕೂಟ ಏರ್ಪಡಿಸಪ್ಪ! ಹೀಗೆ ನನ್ನ ಮಗಳ ಮದುವೆ ಮಾಡುವ ಯೋಜನೆ ಉಂಟು ಅಂತ, ಎಲ್ಲರಿಗೂ ಮುಗುಮ್ಮಾಗಿ ತಿಳಿಸು. ನಮ್ಮ ಕಾಲೇಜಿನ ಅವಿವಾಹಿತ ಮಾಸ್ತರು ಗಳು ಕೆಲವರನ್ನು ಆಹ್ವಾನಿಸು. ಮಿಕ್ಕಂತೆ ನಿನಗೆ ಯಾರ‍್ಯಾರು ಸೂಕ್ತ ಅಂತ ಕಾಣುತ್ತೆ ಅವರನ್ನು ಕರೆಸು. ಆ ದಿನ ನನಗಿಷ್ಟವಾದವರನ್ನು ಚುನಾಯಿಸುತ್ತೇನೆ" ಎಂದಳು ಸರಸು.

ಕಹಳೆ ಬಾಯಿಗೆ ಮುತ್ತು ಕೊಡೊ ವಿದ್ಯೆಯನ್ನು ಪುಥಾರಿಗೆ ಹೇಳಿ ಕೊಡ ಬೇಕೇ ? ಸುತ್ತುಮುತ್ತಲಿನ ಶ್ರೀಮಂತ ಮನೆಯವರಿಗೆಲ್ಲಾ ವನ ಭೋಜನದ ಆಹ್ವಾನ ಹೋಯಿತು. ಗತ್ತಾ ಗತ್ತಾ ಸರಸು ವರನನ್ನು ಆಯ್ಕೆ ಮಾಡುತ್ತಾಳೆ ಎಂದೂ ನಂಬಲರ್ಹವಾದ ಕಡೆಗಳಿಂದ ಸುದ್ದಿ ಹರಡಿತು. ಪುಥಾರಿಯ ವ್ಯವಹಾರಗಳನ್ನು ಥೌಲಿನ ಜೀವನವನ್ನೂ ಸರಸುವನ್ನೂ ಕಂಡಿದ್ದ, ಹಲವಾರು ಗಂಡು ಮಕ್ಕಳ ತಂದೆ ತಾಯಂದಿರು "ಸರಸೂನ ನಮ್ಮ ಮನೆ ಸೊಸೆಯನ್ನಾಗಿ ಮಾಡಿಕೋಬೇಕು" ಎಂದು ಆಸೆಪಟ್ಟರು.

ಪೌರ್ಣಮಿಯ ವನಭೋಜನಕ್ಕೆ ಅದ್ಧೂರಿ ಸಿದ್ಧತೆಗಳಾಗಿತ್ತು. ಹಸಿರು ಜಮ ಖಾನ ಹಾಸಿದಂತಿದ್ದ ಹುಲ್ಲುಗಾವಲಿನ ಸುತ್ತ ಎಂತೆಂತಹ ದೀಪಗಳು! ಚಂದ್ರನ ಬೆಳಕಿಗೆ ಕುಮ್ಮಕ್ಕು ಕೊಡುವಂತಿದ್ದ ಬಣ್ಣ ಬಣ್ಣದ ಬಲ್ಬುಗಳು, ಆರಾಮ ಕುರ್ಚಿಗಳು, ಬಂದವರ ದಾಹ ಅಡಗಿಸಲು ಏರ್ಪಾಡುಗಳು ಹಸಿವನ್ನು ಉದ್ರೇಕಿಸುವ ತಿರಿದಿಂಡಿ ತಟ್ಟೆಗಳು. ಆದರದಿಂದ ಬಲವಂತಮಾಡುವ ಪರಿಚಾರಕರು ಮುಖ್ಯ, ರಾಜ ವೈಭವ ಅಂತ ಅನ್ನಬಾರದು ಚಕ್ರವರ್ತಿ ವೈಭವ ಅನ್ನಬೇಕು.

ಪುಢಾರಿ, ಕಡಲತೀರದ ಆಕೆ, ಸರಸು, ಮೂವರೂ ಹೊರ ಬಾಗಿಲಿನಲ್ಲೇ ನಿಂತು ಬಂದ ಅತಿಥಿಗಳನ್ನು ಆದರದಿಂದ ಬರ ಮಾಡಿಕೊಂಡು, ಪರಸ್ಪರ ಪರಿಚಯಗಳನ್ನು ಮಾಡಿ ಕೊಟ್ಟು, ಭೋಜನ ಕೂಟದತ್ತ ಕಳಿಸುತ್ತಿದ್ದರು.

ಹೀಗೆ ಬಂದ ಅತಿಥಿಗಳಲ್ಲಿ ಮಂಡಿ ಸಾಹುಕಾರ ಮಾನಪ್ಪನವರು, ಮಗನ ಜತೆಗೆ ಬಂದಾಗ, ಮುಂದಾಲೋಚನೆಮಾಡಿ ಸರಸೂಗೆ ಒಂದು ಉಡುಗೊರೆ ತಂದಿದ್ದರು. ಚಿನ್ನದ ಹೂಬುಟ್ಟಿಯಲ್ಲಿ ವಜ್ರ ಕೆಂಪು ವೈಢೂರ್ಯಗಳಿಂದ ರಚಿಸಿದ ಹೂವುಗಳನ್ನಿಟ್ಟು ಸರಸೂಗೆ ತಮ್ಮ ಮಗನ ಕೈಲಿ ಶುಭಾಶಯ ಕೋರಿಸಿ ಕೊಡಿಸಿದರು. ಅದೇರೀತಿ ಮುಂದಾಲೋಚನೆ ಮಾಡಿದ ಇನ್ನೊಬ್ಬರು, ಅಬ್ಕಾರಿ ಕಂಟ್ರಾಕ್ಟರ್ ಅಬ್ಬಯ್ಯ ನವರು. ಅವರು ಮಗನ ಕೈಲಿ ವಜ್ರ ಪಚ್ಚೆ ಮೆಟ್ಟಿದ್ದ ಚಪ್ಪಲಿ ಜತೆಯನ್ನು ಉಡುಗೊರೆಯಾಗಿ ಸರಸುವಿಗೆ ಕೊಡಿಸಿದರು. ಆ ಮಗ ಅಬ್ಕಾರಿ ಮಗ. ಉಡುಗೊರೆ ಕೊಡ ಹೋದಾಗ ಅಮಲೇರಿ ಅವ, ಆ ಪ್ಲಾಟ್‌ಫಾರಂ ಚಪ್ಪಲಿಗಳನ್ನು ಸರಸು ಪಾದಗಳಿಗೆ ತಾನೇ ಪೋಣಿಸಿದ. ಎಷ್ಟು ಚೆನ್ನಾಗಿ ಅವಳ ಪಾದಗಳನ್ನು ಆ ಪ್ಲಾಟ್ ಫಾರಂ ಚಪ್ಪಲಿಗಳು ಥಳಥಳಿಸುತ್ತ ಹಿತವಾಗಿ ತಬ್ಬಿಕೊಂಡಿತು ಅಂತ! ಅಬ್ಕಾರಿ ಅಬ್ಬಯ್ಯ ಬಹಳ ಚೂಟಿ ಆಸಾಮಿ. ಸರಸೂಗೆಂದು ಮಾಡಿಸಿದ್ದ, ಒಂದು ತಿಂಗಳಲ್ಲಿ, ಹತ್ತುಸಾವಿರ ಖರ್ಚಿನಲ್ಲಿ.

ಮುಂದಾಲೋಚನೆಮಾಡಿದ ಮೂರನೆಯವರು ರೇಷ್ಮೆ ಅರಸು, ಕಾಮಯ್ಯ ನವರು. ಮೂರು ಹೆಸರಾಂತ ರೇಷ್ಮೆ ಕಾರ್ಖಾನೆಗಳನ್ನೂ ಸೀರೆ ನೆಯ್ಯುವ ಆರು ಫ್ಯಾಕ್ಟರಿಗಳನ್ನು, ಆರು ತಿಂಗಳ ಹಿಂದೆ ತಮ್ಮ ತಂದೆಯ ನಿಧನರಾದ ಕಾರಣ, ಪಡೆದಿದ್ದ ಕಾಮಯ್ಯ ವೀರ ಕೊಬ್ಬಿದ್ದಕಾಮಯ್ಯನೇ. ಸರಸು ಅಪ್ಪ, ಮಾರಿದ ಮೋಟಾರು ಗಳನ್ನು ಅವನೇ ಕೊಂಡುಕೊಳ್ಳುತ್ತಿದ್ದ. ಆ ಮೋಟಾರಿನಲ್ಲಿ ಕೂತರೆ ಏನೋ ಹಿತ ಅವನಿಗೆ. ಪಚ್ಚೆಮುತ್ತುಗಳಿಂದ ನೇಯಲ್ಪಟ್ಟಿದ್ದ, ಪೀತಾಂಬರವನ್ನು ಅವ ಶ್ರದ್ಧೆ ವಹಿಸಿ ನೇಯ್ಸಿಸಿ, ಉಡುಗೊರೆ ಕೊಡಲು ತಂದಿದ್ದ, ದೇಶಾವರದ ನಗೆ ಹೂಡುತ್ತ ಆ ಪೀತಾಂಬರವನ್ನು ಸರಸುವಿನ ಹಾಲುಗೈಗಳಲ್ಲಿಡುತ್ತ "ಹ್ಹಾ! ಎಷ್ಟು ಚೆನ್ನಾಗಿದೆ" ಎಂದು ಸರಸು ಉದ್ಗಾರ ತೆಗೆದಾಗ, ಆನಂದದ ಅಲೆಯಮೇಲೆ ತೇಲುತ್ತಾ ಭೋಜನ ಕೂಟದತ್ತ ಹರಿದುಹೋದ.

ಉಡುಗೊರೆಯನ್ನು ತಂದ ನಾಲ್ಕನೆಯವನು, ಕಾಲೇಜ ಮಾಸ್ತರು. ವೀರ ಪಿ. ಎಚ್. ಡಿ. ನರಸಿಂಗು, ಕಾಳಿದಾಸನ ಶಕುಂತಲ ನಾಟಕವನ್ನು, ಸ್ವಹಸ್ತದಿಂದ ಅಣಿಯಾಗಿ ಬರೆದು, ತಂದಿದ್ದ. ಆ ಹಸ್ತ ಪ್ರತಿಯನ್ನು ಸರಸುವಿಗೆ ಅರ್ಪಿಸಿದಾಗ, ಸರಸೀ ಮುಖ ಬೆಳದಿಂಗಳಿಂದ ತುಂಬಿದಂತಾಯ್ತು. ಹೊತ್ತಿಗೆಯನ್ನು ಆಕೆ ಎದೆಗೆ ಅಮುಕಿ ಹಿಡಿದುಕೊಂಡಾಗ, ನರಸಿಂಗು ಎದೆ ಡಬ ಡಬ ಹೊಡಿದುಕೊಂಡಿತು.

ವನ ಭೋಜನ ಸಾಂಗವಾಗಿ ನೆರವೇರಿತು. ಬೆಳ್ಳಿ ತಟ್ಟೆಗಳಲ್ಲಿ ಏನೇನಲ್ಲಾ ತಿಂಡಿ ತಿನಸುಗಳನ್ನು ಸರಬರಾಜಿಸಿದರು ಅಂತ! ಷಹರಿನ ಎಲ್ಲಾ ಸಿಂಧಿ ಮಿಠಾಯಿ ಅಂಗಡಿ

ಗಳಿಂದ ಗುಜರಾಥಿ ಹೋಟಲುಗಳಿಂದ, ಉಡುಪಿ ಭವನಗಳಿಂದ ಎಂತೆಂತಹಾ ತಿಂಡಿಗಳನ್ನು ತರಿಸಿದ್ದರು ಅಂತ!

ಊಟ ಆಯ್ತು. ತಾಂಬೂಲ ಕೊಟ್ಟಮೇಲೆ ಪ್ರಧಾರಿಗಳು ಧನ್ಯವಾದವನ್ನು ಅರ್ಪಿಸುತ್ತ, "ನನ್ನ ಮಗಳು ಸಾಹುಕಾರ್ ಮಾನಪ್ಪನವರ ಮಗನನ್ನು ಮದುವೆಯಾಗುತ್ತಾಳೆ" ಈ ಶುಭ ಸುದ್ದಿಯನ್ನು ತಿಳಿಸಲು ಹರ್ಷಿಸುತ್ತೇವೆ ಎಂದರು.

ಕಾಲೇಜ್ ಮಾಸ್ತರನ್ನು ಮದುವೆ ಆಗ್ತಾಳೆ ಅಂತ ಅಂದುಕೊಂಡಿದ್ದರೇನೋ ? ಆದರೆ ಸರಸು ಜಾಣೆ, ಮಂಡಿಸಾಹುಕಾರ್ ಮಾನಪ್ಪನವರಿಗೆ ಒಬ್ಬನೇ ಮಗ ಅಂತ ತಿಳಿದುಕೊಂಡಿದ್ದಳು. ಅಲ್ಲದೆ ಮಂಡಿ ವ್ಯಾಪಾರವನ್ನೆಲ್ಲಾ ರಾಷ್ಟ್ರೀಕರಣಮಾಡಿ, ಮಾನಪ್ಪನವರ ಮಗನಿಗೆ, ವಹಿಸಿಕೊಡುವ ಮಾತು ದಿಳ್ಳಿಯಲ್ಲಿ ಕೇಳಿಬಂದಿದುದನ್ನು ಅರಿತಿದ್ದಳು.

ಆದಕ್ಕೆ ಮುತ್ತಿನ ಚಪ್ಪರವನ್ನು ಮಾನಪ್ಪನವರ ಮಗನಿಗೇ ಹೂಡಿಸಿದಳು. ಅವಳಿಗೆ ಗೊತ್ತಿತ್ತು ಕಾಲೇಜ್ ಮಾಸ್ತರನ್ನು ಯಾವಾಗ ಬೇಕಾದರೂ ಮನೆ ಪಾಠಕ್ಕೆ ಕರೆಸಿಕೊಳ್ಳಬಹುದು ಅಂತ.

—ಪ್ರಸಾದ್



ನಿಮಗೆಲ್ಲ ಈ ವರ್ಷ ಪ್ಯಾಸ್
ಇಲ್ಲದೆ ಇದ್ದರೆ ನನ್ನ ಸಂಬಳ ಖೋತಾ !!

"ಹೀಗುಂಟಾ ತ್ಸು ತ್ಸು"

'ಹೀಗು ಉಂಟಾ ತ್ಸು...ತ್ಸು' ಎಂಬ ಅಜ್ಜಿಯ ಈ ಉದ್ಗಾರವೇ ನನ್ನನ್ನ ಹೊಸಿಲನ್ನು ಎಡುವುವಂತೆ ಮಾಡಿತು. ಅಜ್ಜಿಯ ಈ ಉದ್ಗಾರದ ಹಿಂದೆ ಕಠೋರ ಟೀಕೆ ಅಡಗಿಕೊಂಡಿತ್ತು. ಈ ಉದ್ಗಾರದ ಅನುಭವ ಹಿಂದೆ ಎರಡು ಸಾರಿ ಉಂಟಾಗಿತ್ತು. ಅಜ್ಜಿ 1947 ನೇ ಜನವರಿಯಲ್ಲಿ ಹೇಳಿದ್ದರು...

'ಅಲ್ಲೋ ರಾಮು ಹೀಗು ಉಂಟಾ...ತ್ಸು ತ್ಸು'

'ಯಾವುದಜ್ಜಿ' ಎಂದೇ ತುಸ ಬೇಸರದಿಂದ

'ಅದೇ ಕಾಣೊ ಅದೆಂತದೊ ಉಪವಾಸ ಮಾಡ್ತಾರಂತಲ್ಲೋ'

'ಓಹೋ ಅದೇ ! ಅದು ಬರೀ ಉಪವಾಸ ಅಲ್ಲ ಅಜ್ಜಿ...'ಉಪವಾಸ ಸತ್ಯಾಗ್ರಹ' ಎಂದು ಎದೆ ತಟ್ಟಿಕೊಂಡು ಜಂಬದಿಂದ ನುಡಿದೆ.

'ಅದು ಯಾಕಪ್ಪ' ಎಂದು ಅಷ್ಟೇ ತಂಪಾದ ಧ್ವನಿಯಲ್ಲಿ ಕೇಳಿದರು ಅಜ್ಜಿ

'ನಾವು ಎಷ್ಟು ದಿನ ಪರರ ದಾಸ್ಯದಲ್ಲಿ ಇರುವುದು. ಮನುಷ್ಯ ಎಂದ ಮೇಲೆ ನಾಲ್ಕು ದಿನ ಸ್ವತಂತ್ರದಿಂದ ಬಾಳದಿದ್ದ ಮತ್ತೆ ಅವನ ಬಾಳು ಯಾತಕ್ಕೆ' ಎಂದು ಅಜ್ಜಿಯ ತಂಪು ನುಡಿಗೆ ಕೆರಳಿ ಕೇಳಿದೆ.

'ಈಗೇನೊ ನಿನಗೆ ಗುನಗಾಗಿರೋದು'

'ಅಯ್ಯೊ ಅಜ್ಜಿ ನಿನಗೆ ಅದೇ ಗೊತ್ತಿಲ್ಲದೇ ಇರೋದು' ಎಂದು ಅಜ್ಜಿಯ ಅಲ್ಪಮತಿಗೆ ಕನಿಕರ ಪಟ್ಟುಕೊಂಡು...' ಪಂಜರದಲ್ಲಿಟ್ಟು 'ಗಿಣಿ' ಸಾಕಿದ ಹಾಗೆ ಸಾಕ್ತೀನಿ ಅಂದ್ರೆ ಆಯ್ತು... 'ಸ್ವಾತಂತ್ರ್ಯ' ಬೇಕಜ್ಜಿ...'ಸ್ವಾತಂತ್ರ್ಯ' ಎಂದು ಇನ್ನೇನು ಹೇಳಲು ತೋಚದೆ ಸ್ವಾತಂತ್ರ್ಯ ಮಂತ್ರವನ್ನೇ ಪುನರ್ ಜಪಿಸಿದೆ.

'ಅದಕ್ಕೆ ಉಪವಾಸ ಮಾಡಿ ದೇಹ ಕೆಡಿಸಿಕೊಂಡರೆ ರಾಜ್ಯ ಕೊಡ್ತಾರೇನೊ ಮಂಗು...ನಾನು ಹೇಳೊಹಾಗೆ' ಎಂದು ನನಗೆ ತಾರಕ ಮಂತ್ರ ಉಪದೇಶವನ್ನು ಮಾಡಲು ಬಂದ ಅಜ್ಜಿಯ ಮಾತನ್ನು ಅರ್ಧದಲ್ಲೇ ಕತ್ತರಿಸಿ.

'ರಾಜ್ಯ ಕೊಡ್ತಾರಾ ಎಂದು ಕೇಳಿದಿಯಲ್ಲಾ ಬರೀ ಕೊಡೋದಲ್ಲ...' ಉಪವಾಸ ಸತ್ಯಾಗ್ರಹ' ಎಂಬ ಭಯಂಕರ ಅಸ್ತ್ರಕ್ಕೆ ಹೆದರಿ ಕಂಗಾಲಾಗಿ, ಶರಣು ಹೊಡೆದು ನಮ್ಮ

ದೇಶ ಬಿಟ್ಟು ಹೇಳದೇ ಕೇಳದೇ ಫರಂಗಿಯವರು ಪರಾರಿಯಾಗ್ತಾರೆ. ಇಷ್ಟೆಲ್ಲಾ ನಿನ್ನ ಕಣ್ಣು ಪೊರೆ ತೆಗಿಸೋಕೆ ಮುಂಚೆಯೇ ನಡೆದು ಹೋಗುತ್ತೆ...ಕಣ್ಣು ಆಪರೇಷನ್ ಆದನಂತರ ನೀನು ಸ್ವತಂತ್ರ್ಯ ಭಾರತವನ್ನೇ ನೋಡ್ತೀಯಾ ಎಂದು ಹೇಳಿ ಕಡೆಯದಾಗಿ 'ಜೈ ಭಾರತ್ ಮಾತಾಕಿ ಜೈ' ಎಂದು ಅಂದಿನವರೆಗೂ ಪೋಲಿಸನವರ ಮುಂದೆ ಘೋಷಿಸಲು ಹೆದರಿದ್ದ ನಾನು, ಅಜ್ಜಿಯ ಮುಂದೆ ಜೋರಾಗಿ ಕೂಗಿ ನನ್ನ ಪೌರುಷದ ಪ್ರದರ್ಶನ ತೋರಿಸಿಕೊಂಡೆ.'

ಇದಾದ್ಧಮತ್ತೆ ಎರಡನೇ ಸಾರಿ ಉದ್ಗಾರ ತೆಗೆದಿದ್ದು 1949ನೇ ಇಸವಿಯಲ್ಲಿ 'ಹೀಗು ಉಂಟಾ ತ್ಸು ತ್ಸು'

'ಯಾವುದಜ್ಜಿ' ಎಂದು ಗಾಂಧಿಟೋಪಿಯನ್ನು ಸರಿಯಾಗಿ ತಲೆಗೆ ಹಾಕಿಕೊಳ್ಳುತ್ತಾ. ಯಾಕೆಂದರೆ ಅಜ್ಜಿಗೆ ಈಗ ಸ್ಪಷ್ಟ ಕಾಣುತ್ತಿದ್ದರಿಂದ ಈಗ ಎಲ್ಲಾ ನೇರವಾಗೆ ಇರಬೇಕು.

'ಅಲ್ಲಾ ಆ ಗುರುರಾಜೈಂಗಾರಿ ತಮ್ಮ ಮಗನಿಗೆ ಹೊಲೆಯರ ತಿಪ್ಪಿಯನ್ನು ತಂದುಕೊಂಡು ರಾಜಾರೋಷವಾಗಿ 'ತಿರುಪತಿ ದೇವಸ್ಥಾನದಲ್ಲಿ' ಎಲ್ಲಾ ನಮ್ಮ ಪದ್ಧತಿ ಪ್ರಕಾರ ಮದುವೆ ಮಾಡಿಕೊಟ್ಟರಂತೆ.. ಜಾತಿಯನ್ನು ಕೆಡಸಿಕೊಂಡನಲ್ಲಾ ಈ ಮೂಳನಿಗೆ ಏನು ಬಂತು ಕೇಡು.'

'ಅವನಿಗೆ ಯಾವ ಕೇಡು ಬರಲಿಲ್ಲ...ಸುವರ್ಣ ಪದಕದ ಜೊತೆ ಪದ್ಮಶ್ರೀ ಪ್ರಶಸ್ತಿ ಬಂತು...ನೋಡಜ್ಜಿ ಹೊಲೆಯ, ಬ್ರಾಹ್ಮಣ ವೈಶ್ಯ ಈ ಭೇದವೇ ಇರಬಾರದು ಎಲ್ಲರೂ ಮನುಷ್ಯರೇ ಅದರಲ್ಲಿ ನಾನು ಹೆಚ್ಚು ನೀನು ಕಡಿಮೆ ಎಂಬುದೇ ಇಲ್ಲ. ಎಲ್ಲಾ ದೇವರ ಮಕ್ಕಳೇ...ಅದರಲ್ಲೂ ಹೊಲೆಯ ಐಯ್ಯಂಗಾರ್‍ರು, ಶೆಟ್ಟರು ಈ ಭೇದ ಬೆಳೆಯಬಾರದೂ ಎಂದು ಮತ್ತು ಹೊಲೆಯರಿಗೆ ದೇವಸ್ಥಾನದಲ್ಲಿ ಪ್ರವೇಶ ಉಂಟು ಎಂದು ತೋರಿಸಲು ಗುರುರಾಜೈಂಗಾರಿ ಹೊಲೆಯರ ಹುಡುಗಿಯನ್ನು ತನ್ನ ಮಗನಿಗೆ ತಂದುಕೊಂಡು, ತಿರುಪತಿ ದೇವಸ್ಥಾನದಲ್ಲೇ ಮದುವೆಮಾಡಿ ಸರ್ಕಾರದಿಂದ ಬಿರದು ಬಾವಲಿಯನ್ನು ಪಡೆದ, ಎಂದು ಹೇಳಿ ನನ್ನತ್ತ ಕೊಟ್ಟ ತಂಪು ಪಾನೀಯವನ್ನು ಕುಡಿದು ಹೊರಗೋಡಿದೆ.

ಇದಾದ ಮೇಲೆ ಇಂದು ಈ ರೀತಿಯಾದ ಉದ್ಗಾರ ಕೇಳಿ ನನಗೆ ಯೋಚನೆಗೆ ಇಟ್ಟುಕೊಂಡಿತು, 'ಹಿಂದಿಯನ್ನೇ ಓದಿ ಮುಂದಕ್ಕೆ ಬನ್ನಿ' ಎಂಬ ಮಂತ್ರಿಗಳ ಭಾಷಣ ಕೇಳಿಯೇ ಅಥವಾ ಪಾಕಿಸ್ಥಾನದವರು 'ಕಾಶ್ಮೀರ' ನಮ್ಮದು ಎಂದು ಕೇಳಿದ್ದಕ್ಕೆ, ಮೈಸೂರಿನವರು 'ಗೋವಾ' ನಮ್ಮದು ಎಂದು ಮಹಾರಾಷ್ಟ್ರದವರು 'ಗೋವಾ' ನಮ್ಮದು ಎಂದು ತಮ್ಮೊಳಗೆ ಜಗಳವಾಡುವುದನ್ನು ನೋಡಿಯೇ ಅಜ್ಜಿಯ ಈ

ಉದ್ಗಾರ ಎಂದು ನೂರೆಂಟು ಯೋಚನೆ ಮಾಡುತ್ತಾ, ಎಡವಿದ ಕಾಲಿನ ನೋವನ್ನು ಅನುಭವಿಸುತ್ತಾ ಒಳಗೆ ಬಂದು ದೊಪ್ಪನೆ ಕುರ್ಚಿಯಲ್ಲಿ ಕುಸಿದು ಕುಳಿತೆ.

ನನ್ನನ್ನ ನೋಡಿ ಇನ್ನಷ್ಟು ಆಶ್ಚರ್ಯದಿಂದ ಜೋರಾಗಿ 'ಹೀಗು ಉಂಟಾ' ಎಂದರು. 'ನಾನು ಯಾವುದು' ಎಂಬ ಮುಖಭಾವ ಮಾಡಿದೆ. ಮಾತಾಡಲು ಆಗದೆ ಗಂಟಲನ್ನು ಅದುಮಿ ಹಿಡಿದಿದ್ದ ಹೊಸ ಖಾದಿ ವೆಸ್ಟ್ ಕೋಟಿನ ಗುಂಡಿ ಬಿಚ್ಚುತ್ತಾ

'ಸರೋಜಮ್ಮನವರ ಮಗ ಪ್ರಸಾದ್‌ನಿಗೆ ಆ ಶೀಲುವನ್ನು ಕೊಟ್ಟು ಮದುವೆ ಆಯಿತಂತೆ. 'ಹುಂ ಆಯಿತು ಹುಡುಗ ಇಂಜನಿಯರಿಂಗ್ ಓದಿದ್ದ, Foreignಗೆ ಹೊಗ್ತಾನೆ ಅನ್ನೊ ಖಾತ್ರಿ ಇನ್ನು ಹುಡುಗ ಸಿನಿಮಾ ಸ್ಟಾರ್ ತರ 'ಡ್ರೆಸ್' ಮಾಡಿ ಕೊಳ್ಳುತ್ತಿದ್ದ...ಅದಕ್ಕೆ ಮದುವೆ ಆಯಿತು ಅದಕ್ಕಿಷ್ಟು ಅಶ್ಚ್ಯರ್ಯವೇ ಎಂದು ಯಾವುದೂ ಗಹನವಾದ ವಿಷಯಾಂತ ಅಸಕ್ತಿಯಿಂದ ಕೇಳುತ್ತಿದ್ದ, ನಾನು ನಿರುತ್ಸಾಹ ದಿಂದ ಉತ್ತರಿಸಿದೆ.

'ಅದು ಅಲ್ಲವೊ ಮದುವೆ ಆಯಿತಲ್ಲಾ...'ಧಾರೆ' ಮುಗಿದು ೨ ಘಂಟೆಯಾದ್ರು ಊಟಕ್ಕೆ ಯಾರು ಬೀಗರನ್ನ ಕರೀಲೇ ಇಲ್ಲವಂತೆ...ಸರ್ರೋಜಮ್ಮನೂ ಆಗ ಕರೀತಾರೆ ಈಗ ಕರೀತಾರೆ ಅಂತ ಕಾದು ನೋಡಿದರಂತೆ...ಕಡೆಗೂ ರೋಸಿ ಹೋದರಂತೆ, ಅಷ್ಟರಲ್ಲೇ 'ಬೀಡಾವನ್ನು' ಕೈಯಲ್ಲಿ ಹಿಡಿದುಕೊಂಡು ತೇಗುತ್ತಾ ಬರುತ್ತಿದ್ದ ಹೆಣ್ಣಿನ ತಂದೆಯವರನ್ನ ನೋಡಿ ಇನ್ನಷ್ಟು ಕೆರಳಿ...'ಇನ್ನು ಎಷ್ಟು ಹೊತ್ತು ಊಟಕ್ಕೆ ? ಎಂದರಂತೆ'

'ಯಾರ ಊಟ ?' ಎಂದು ಏನು ತಿಳಿಯದಂತೆ ಆಶ್ಚರ್ಯದಿಂದ ಹೆಣ್ಣಿನ ತಂದೆ ಕೇಳಿದರು. 'ಇನ್ಯಾರ ಊಟ...ನಮಗೆ ಎಂದರೆ ನಿಮ್ಮ ಬೀಗರಿಗೆ ಅವರ ಕಡೆಯವರಿಗೆ ಎಂದು ಸುತ್ತಲೂ ಇದ್ದ ಪರಿವಾರದವರನ್ನ ತೋರಿಸಿದರಂತೆ.

'ಒಂದು ನಿಮಿಷ ನೆರದಿದ್ದ ಎಲ್ಲರನ್ನು ನೋಡಿ ಹೆಣ್ಣಿನ ತಂದೆ ಗರ ಬಡಿದವರ ಹಾಗೆ ನಿಂತರು.

'ಇದ್ಯಾಕೆ ಹೀಗೆ ? ನಿಮ್ಮ ವಂಶದಲ್ಲಿ ಯಾರಿಗಾದ್ರು ಮೂರ್ಛೆ ರೋಗ ಇತ್ತೆ' ಎಂದು ಸರೋಜಮ್ಮನವರ ಅಳಿಯ ಡಾಕ್ಟರು ಗುಮಾನಿ ಪಟ್ಟರಂತೆ.

'ಇನ್ನೊಂದು ಸಾರಿ ತದೇಕ ಆಶ್ಚರ್ಯದಿಂದ ಎಲ್ಲರನ್ನೂ ವೀಕ್ಷಿಸಿ 'ಸ್ವಾಮಿ ನಮ್ಮ ದೇಶದ ಕಾನೂನು ತಮಗೆ ಅರ್ಥವಾಗಲಿಲ್ಲವೇ' ಎಂದು ಗಾಂಧಿ ಟೋಪಿ ಹಾಕಿಕೊಂಡು ನಿಂತಿದ್ದ ಬೀಗರನ್ನು ಕನಿಕರದಿಂದ ನೋಡಿದರಂತೆ.

'ಹಾಗಂದ್ರೆ ಏನ್ರಿ' ಅಂತ ವಿಧಾನ ಸಭೆಗೆ ಮೂರು ಸಾರಿ ನಿಂತು ಠೇವಣಿ ಕಳೆದುಕೊಂಡು ನಾಲ್ಕನೇ ಬಾರಿಯೂ ನಿಂತಿದ್ದ ಕಿಟ್ಟಪ್ಪನವರು ಪ್ರಶ್ನೆ ಮಾಡಿದರಂತೆ.


'ಸ್ವಾಮಿ ನಾನು ನಮ್ಮ ಮನೆಯವರೆಲ್ಲಾ ಸೇರಿ ಒಂಬತ್ತು ಜನ ಆಗ್ತೀವಿ ಈಗ ಅಳಿಮಯ್ಯನ್ನ ಸೇರಿಸಿ ೧೦ ಜನ ಆಯಿತು...ಹತ್ತು ಜನದ ಮೇಲೆ ಕಾನೂನು ಪ್ರಕಾರ 'ಎಂದು ಮಾತು ನಿಲ್ಲಿಸಿ ಹೊರಗೆ ನಿಂತಿದ' ಕಾನಿಸ್ಟೇಬಲ್‌ನ ತೋರಿಸಿ ಮತ್ತೆ ಊಟಕ್ಕೆ 'ಎಲೆ ಹಾಕಬಾರದೂ...ಈಗ ನಮ್ಮದೆಲ್ಲಾ ಊಟ ಆಯಿತು' ಎಂದು ನವೀರಾಗಿ ತೇಗಿ, ಕೈಯಲ್ಲಿ ಹಿಡಿದಿದ್ದ ಬೀಡಾವನ್ನು ಬಾಯಿಗೆ ತುರಿಕಿಕೊಂಡು ಒಳ ಹೋದರಂತೆ.

'ಪಾಪ ಮಗನ ಮದುವೆ ಆದ್ದೂರಿಯಿಂದ ಮಾಡಿ ಊರಿಗೆ ಊಟ ಹಾಕ್ತೀನಿ ಅಂತ ಬಂದಿದ್ದ ಸರೋಜಮ್ಮ, ತಮಗೇ ಊಟ ಇಲ್ಲದೆ ಉಪವಾಸದಿಂದ ಮನೆಗೆ ಹಿಂತಿರುಗಿದರಂತೆ'

'ಹೌದು ಅಜ್ಜಿ, ಈಗ ಹತ್ತು ಜನಗಳಮೇಲೆ ಎಲೆ ಹಾಕೊ ಹಾಗಿಲ್ಲಾ'- ಎಂದು ಎಲ್ಲಾ ಕೇಳಿ ಅಜ್ಜಿಗೆ ಸಮಜಾಯಿಸಲು ಯತ್ನಿಸಿದೆ.

'ಗೊತ್ತಾಯ್ತೊ...ನಾನು ಆಗ್ಲೆ ಅಂದುಕೊಂಡೆ, 'ಉಪವಾಸ ಮಾಡಿ' ದೊರಕಿಸಿ ಕೊಂಡ ರಾಜ್ಯದಲ್ಲಿ ಉಪವಾಸ ಇಲ್ಲದೇ ಸುಭಿಕ್ಷವಾಗಿರುತ್ತಾ...ಎಂದು ಅಜ್ಜಿ ಹೇಳುತ್ತಿದ್ದನ್ನು ಕೇಳದೆ...ಅಡುಗೆ ಮನೆಕಡೆ ದವಡಾಯಿಸಿದೆ.

—ಕ. ನ. ರ.



ತಾತನಿಗೆ ಕಿವಿಕೇಳಿಸುಲ್ಲ ಅಂತ ಜೋರು ಮಾಡ್ತೀಯಾ ? ಅವರನ್ನು ಚೌಟ್ಚೆ ಎಬ್ಬಿಸ್ತೀನಿ ಆಮೇಲೆ.

ಹೊಸ ವಿಧಾನ

(ಅಥವಾ "ಖಟ್ ಮಲ್ ಕ್ಯಾ")

"ಕಷ್ಟಪಟ್ಟು ಬಿಳೀ ಆನೇ ಮರೀನಾದ್ರೂ ಆಗಲಿ, ಹುಲಿ ಮರಿ ಆಗ್ಲಿ, ಇಲ್ಲ ಕಡೇಪಕ್ಷ ಇಲೀ ಮರೀನಾದ್ರೂ ಸಾಕಬಹುದು ಅನ್ನಿಸುತ್ತೆ. ಆದರೆ, ಈ ತಿಗಣೆ ಮರಿ, ಸೊಳ್ಳೆಮರಿ ಸಾಕ್ಕೊಂಡಿರೋದು ಬಹಳ ಕಷ್ಟ. ಎಂಥಾ ಘನ ಸರ್ಕಾರ ಬಂದರೂ ಇವುಗಳು ಹೋಗೋಲ್ಲ. ಅಂಕುಶ ಇದ್ರೇನು ನಿರಂಕುಶ ಪ್ರಭುತ್ವ ಇದ್ರೇನು ಎಂಥೆಂಥ ಕಂಪೆನಿಗಳು ಎಂಥೆಂಥ ಔಷಧಿ ತಯಾರಿಸುತ್ವೆ! ಎಷ್ಟು ಪಾಂಚವಾರ್ಷಿಕ ಯೋಚನೆಗಳಾದರೆ ಏನುಪಯೋಗ? ಸರಿಯಾದ ಸೊಳ್ಳೆ ಔಷಧ, ತಿಗಣೆ ಔಷಧ ಇಲ್ದಿದ್ದ ಮೇಲೆ" ಎಂಬ್ಕೊಂಡ್ತಾ ಅಂಗಡಿಯವನು ಕೊಟ್ಟ ತಿಗಣೆ ಔಷಧೀನ ತಿರುಗಿಸಿ ಮರುಗಿಸಿ ನೋಡ್ತಾ ತೊಗೊಂಡು ಬಂದೆ.

"ತಿಗಣೆಗಳನ್ನು ಹುಡುಕಿ ಅವು ಎಲ್ಲಿದೆಯೋ ಅಲ್ಲಿ ಈ ಔಷಧಿಯನ್ನು ಬಾಟ್ಲಿ ಮೇಲಿನ ಟೋಪಿಯ ಎರಡಳತೆಗೆ ಅದರ ಹತ್ತು ಪಟ್ಟು ಸೀಮೆ ಎಣ್ಣೆ ಸೇರಿಸಿ ಎರಚರಿ" ಅಂತ ಇತ್ತು ಭೋದನೆ ಆ ಔಷಧಿ ಚೀಟಿಮೇಲೆ.

ತಿಗಣೆ ಎಲ್ಲಿದೆ ಅಂತ ಗೊತ್ತಾದ್ರೆ ಈ ಔಷಧಿ ಏಕೆ? ಬರೀ ಸೀಮೇ ಎಣ್ಣೇ ಯೊಳಗೆ ತಿಗಣೆ ಸಾಯುತ್ತೆ. ಅಂತಾದ್ರಲ್ಲಿ ಈ ಔಷಧಿ ಅದರೊಳಗೆ ಬೆರಸಿ ಉಪಯೋಗಿಸಿ ಅನ್ನುವುದು ನ್ಯಾಯವೇ ಅಂತ ವಗೈರೆ ವಿಷಯಗಳನ್ನು ಯಾವ ಶೌನಕಾದಿ ಮುನಿ ಗಳಲ್ಲಿ ಬೆಸಗಿಕೊಳ್ಳೋಣ? ಇರಲಿ, ಅಂತ ಔಷಧಿ ಚೀಟಿ ಮೇಲಿನ ಭೋದನೆ ಪ್ರಕಾರ ಮಂಚ, ಟೇಬಲ್, ಕುರ್ಚಿಗಳ ಅಂಗಾಂಗಗಳನ್ನೆಲ್ಲ ಡಾಕ್ಟರಿನಂತೆ ಬಿಡಿಸಿದೆ. ಒಂದು ತಿಗಣೆ ಜಾಡು ಕಂಡಿದ್ದರೆ ಕೇಳಿ! ಅಂತು ಔಷಧೀನೆಲ್ಲಾ ಅದರ ಮೂಲೆ ಮೂಲೆಗೆ ಎರಚಿದೆ. ಅವತ್ತು ರಾತ್ರಿಯಾದ್ರೂ ಆರಾಮವಾಗಿ ನಿದ್ರೆ ಬರುತ್ತೇನೋ ಅಂತ ಮಲಗಿದೆ. ಉಹ್ಞು ಯಥಾಪ್ರಕಾರ ತಿಗಣೆ ಕಡಿತ. ಮಾರನೇ ದಿನ ನಮ್ಮನೇಲಿದ್ದ ಫರ್ನಿಚರ್‌ಗಳನ್ನೆಲ್ಲಾ ತೆಗೆದು ಆಚೆಗೆ ಎಸೆದೆ. ತಿಗಣೆಗಳು ಮರದೊಳಗಿದ್ರೂ ಪುಡಿ ಪುಡಿ ಆಗೋ ಹಾಗೆ!

ಅದೇ ರಾತ್ರಿ ವಸಿಷ್ಠ, ವಿಶ್ವಾಮಿತ್ರ ಇಂಥ ಮಹನೀಯರನ್ನು ನೆನೆಸುತ್ತಾ (ಮೇನಕೆಯನ್ನು ನೆನೆಸಲಿಲ್ಲ! ಅವರಿಗೆಲ್ಲಾ ತಿಗಣೆ ಕಡೀತೋ ಬಿಡ್ತೋ ಗೊತ್ತಿಲ್ಲ!) ಬರೀ ನೆಲದಮೇಲೆ ಮಲಗಿದೆ! ಆದರೂ 'ಬಡ್ಡಿ ಹತ್ತಂದ್ ತಿಗ್ಗಣ್ಣೆ' ಬಿಡ್ಲಿಲ್ಲ!

ಟಾರ್ಚ್ ಹಿಡಿದು ಸೈನ್ಯ ಎಲ್ಲಿಂದ ಬಂತು ಅಂತ ನೋಡಿದೆ, ಡಿಫೆನ್ಸ್ ಮಿನಿಸ್ಟರ್ ಹಾಗೆ! ಎಲ್ಲಿ ಸೈನ್ಯ ಗೊತ್ತೆ, ಪಕ್ಕದ್ಮನೇಯಿಂದ ಬರ್ತಾ ಇದೆ. ಇನ್ನು ತಿಗಣೆ ಔಷಧಿ ಪಕ್ಕದ್ಮನೇಗೂ ನಾನೇ ಹಾಕ್ಬೇಕೆ ಅನ್ನಿಸ್ತು. 'ಛೆ ಛೆ' ಅದು ಸರಿಯಲ್ಲ. ಒಂದು ಹೊಸ ವಿಧಾನ ಕಂಡುಹಿಡೀಬೇಕು ಅನ್ನಿಸ್ತು. ರಾತ್ರಿಯೆಲ್ಲಾ ತಲೆಕೆರಕೊಂಡೆ, ಮೈ ಪರಚಿಕೊಂಡೆ, ಹಾಗೇ ಬೆಳಕಾಯ್ತು ನೋಡಿ. ಎದ್ದೋನೇ "ಎಣ್ಣೇ ನೀರು" ಹಾಕ್ಕೊಳ್ಳೋಣಾಂತ ಎಣ್ಣೆ ಎತ್ಕೊಂಡೆ, ಹಾಗೇ ತಲೇಗೆ ಬುದ್ಧಿ ಬಂತು ನೋಡಿ ಈ ತಿಗಣೇ ಔಷಧೀನ ಅಲ್ಲಿ ಇಲ್ಲಿ ತಿಗಣೇ ಇರೋ ಜಾಗಾನ ಹುಡುಕ್ತಾ ಎರಚೋ ಬದ್ಲು ಎಣ್ಣೆ ಹಚ್ಕೊಂಡಹಾಗೆ ತಿಗಣೆ ಔಷಧಿಯನ್ನೇ ರಾತ್ರಿ ನಮ್ಮ ನಮ್ಮ ಮೈಗಳಿಗೆ ಸವರಿಕೊಂಡರೆ ತಿಗಣೆಗಳೇ ಬಂದು ನಮ್ಮ ಮೈಮೇಲೆ ನಾಶವಾಗುತ್ತಲ್ಲವೇ ? ಇದೇ ಹೊಸ ವಿಧಾನದ ಎಣ್ಣೆ ಸೊಳ್ಳೆಗಳ ನಾಶಕ್ಕೂ ಇಲ್ಲವೇ ಮತ್ಯಾವ ಉಪದ್ರವ (ಉಪದ್ರವಿ ಸ್ತ್ರೀಲಿಂಗ!) ಗಳಿಗೂ ಪ್ರಯೋಗಿಸಿದರೆ ಎಲ್ಲಾ ಊರಿನಲ್ಲಿರೋ ಮುನಿಸಿ ಪಾಲಿಟಿಗಳನ್ನೆಲ್ಲಾ ಒಂದು ಕಡೆಗೆ ತಳ್ಳಬಹುದಲ್ಲ! ಹೀಗೆ ಸೊಳ್ಳೆ ಔಷಧಿ ಮಾಡಿದರೆ ಬೆಂಗಳೂರಿನಲ್ಲಿರೋರೆಲ್ಲಾ "ಚಿರಚಿರಚಿರ ಝಣಝಣ ಝಣ"ಗಳಾಗಿರೋಲ್ವೆ!

"ಯಾವುದಾದರೂ ಕಂಪೆನಿಯೋರು ಇಂಥಾ ಎಣ್ಣೆ ಕಂಡುಹಿಡಿದು ಪುಣ್ಯ ಕಟ್ಕೋಬಾರ್ದೇ?" ಅಂತಾ ಒಂದು ಕೈಲಿ ಸೊಳ್ಳೆ ಓಡಿಸ್ತಾ ಇನ್ನೊಂದು ಕೈಲಿ ತಿಗಣೇ ಹಿಡೀತಾ ಕಳಕಳಿಯಿಂದ ಬೆಸಗೊಳ್ಳಲೇeeee !

—ಹಾ. ಮೈ. ಸೂರಿ

[ಎಂದೋ ನಡೆಸಿ ಪ್ರಯೋಗದಲ್ಲಿರುವ ಈ ವಿಧಾನವು ಈಗ ಶ್ರೀ ಸೂರಿಯವರ ತಲೆಗೆ ಹತ್ತಿರುವುದು ನೋಡಿದರೆ ಈತ ಮುಂದೆ ಭಯಂಕರ ವಿಜ್ಞಾನಿ ಆಗಬಹುದು ಅಂತ ಊಹಿಸಬಹುದು. ಸಂ.]

ಶಿಕಾರಿ

ಬರೆದವರು :
ಕೆ. ಎನ್. ಕಿಟ್ಟನ್

★

ಮಟ ಮಟ ಮಧ್ಯಾಹ್ನ ಹನ್ನೆರಡು ಗಂಟೆಯ ಸಮಯ. ಇಗರ್ಜಿಯಿಂದ "ಡನ್ ಡನ್" ಎಂಬ ಘಂಟಾರವ ಹನ್ನೆರಡು ಬಾರಿ ಮೊಳಗಿತು. ಅದೇ ಸಮಯಕ್ಕೆ ಸರಿಯಾಗಿ ಮುಳ್ಳೂರಿನ ಏಸ್ ಶಿಕಾರಿ ಎಂಕ್ಟಪ್ಪನವರ ಕೋವಿಯಿಂದ ಒಂದು ಡಜ಼ ಗುಂಡುಗಳು ಹಾರಿ, ಆ ಚೌತರ್ಕಿಲ್ಲಿ ನೆಲೆಸಿದ್ದ ಪ್ರಶಾಂತ ವಾತಾವರಣವನ್ನು ಕಲಕಿತು. ಶಿಲುಬೆಯುನ್ನು ಸಿಕ್ಕಿಸಿದ ಸಮಾಧಿಯೊಂದರ ಮುಂದೆ ಎಂಕ್ಟಪ್ಪನವರು ಪೂರ್ಣ ಶಿಕಾರಿ ವೇಷದೊಂದಿಗೆ ಅಟೆ಼ಷ಼ನಲ್ಲಿ ನಿಂತಿದ್ದರು. ಊರ್ದ್ವ ಮುಖವಾಗಿದ್ದ ಕೋವಿಯಿಂದ ಹುಸಿ ಗುಂಡುಗಳು ಹಾರಿದ ನಂತರ ಅದನ್ನು ತಲೆಕೆಳಕಾಗಿ ಹಿಡಿದುಕೊಂಡು, ದುಃಖ ಸೂಚ್ಯವನ್ನು ವ್ಯಕ್ತಪಡಿಸಿ, ಒಂದು ಹೆಜ್ಜೆ ಹಿಂದಕ್ಕೆ ಬಂದು, "ಡಿಸ್‌ಮಿಸ್" ಎಂದು ಒದರಿ, ಕಟ್ಟಿಗೆಯಂತೆ ಸೆಟೆಸಿದ್ದ ಬೆನ್ನನ್ನು ಬಾಗಿಸಿ, ಅಲ್ಲಿಯೇ ಮೌನವಾಗಿ ನಿಂತು ಎಲ್ಲವನ್ನೂ ಅವಲೋಕಿಸುತ್ತಿದ್ದ ನನ್ನೆಡೆಗೆ ಕಣ್ಣಂಚಿನ ದೃಷ್ಟಿಬೀರಿ ಹೆಜ್ಜೆಹಾಕಿದರು ನಾನು ಅವರನ್ನು ಹಿಂಬಾಲಿಸಿದೆ.

" ಈ ದಿನಕ್ಕೆ ಆವಯ್ಯ ಸತ್ತು ಇಪ್ಪತ್ತೈದು ವರ್ಷ ಆಯ್ತು" ಎಂದು ಪೀಠಿಕೆಯಿಲ್ಲದೆ ಪ್ರಾರಂಭಿಸಿದರು ಎಂಕ್ಟಪ್ಪ.

" ಯಾರಾತ...? "ಎಂದು ಕೇಳಿದೆ ನಾನು.

" ಪರಂಗಿಯೋನು. ಯಾವ ದೇಶಾನೋ ಯಾವ ಕೋಸಾನೋ, ಆದ್ರೆ ಮಣ್ಣಾಗಿರೋದು ಈ ನೆಲದಾಗಿ, ಆದ್ಕೆ ಅಣೇಬರಾ ಅನ್ನೋದು..." ಎಂದರು ಅಖಂಡ ವ್ಯಥೆಯಿಂದ.

" ಪರಂಗಿಯೋನೆ ? ಈ ಊರಿಗೆ ಯಾಕೆ ಬಂದ ? ಯಾಕೆ ಸತ್ತ...?"

" ನನ್ನಂಗೆ ಅವನ್ಗೂ ಸಿಕಾರಿ ಉಚ್ಚು. ಈ ಉಚ್ಚಿನಲ್ಲಿ ಪರಿಣಾಮ ಬುಟ್ಟ..."

" ಯಾವಾಗ ಇದು ನಡೆದದ್ದು...?"

ಈ ಕಾಂಗ್ರೆಸ್ನು ರಾಜ್ಯ ಬರೋಕೆ ಮುಂಚೆ ಅಂತಿಟ್ಕೊಳ್ಳಿ. ಸಾವಿರದೊಂಭೈನೂರ ನಲವತ್ತು, ನಲವತ್ತೊಂದನೆ ಇಸ್ವಿ ಇರಬೋದು. ಬೇವಾರ್ಸಿ ಅಂಗೆ ಅಳ್ಳಿಪಳ್ಳಿ ಕಾಡುಮೇಡು ಸುತ್ಕೊಂಡು, ಮುಳ್ಳೂರ್ಗೂ ಬಂದ. " ಯಾರಾದರೂ ಐನಾತಿ ಶಿಕಾರಿಗಳಪ್ರ " ಅಂತ ಊರ ಸುಬೇದಾರ್ರನ್ನ ಕೇಳ್ದ. ಅವ್ರು ನನ್ನ ಎಸ್ರು ಏಳಿದ್ರಿಂದ, ಅವ ನನ್ನ ಉಡ್ಕೊಂಡು ಬಂದ.

" ನೀವು ಅಪ್ನ ಜೊತೆ ಶಿಕಾರಿಗೆ ಹೋದ್ರಿ ಅನ್ನಿ.. "

ಅಂಗೆಲ್ಲಾ ಇನ್ನೊಬ್ರ ಕೂಟಿ ನಾನು ಶಿಕಾರಿಕೆ ಓಗೋದುಂಟೇನ್ರಿ. " ಅದೆಲ್ಲಾ ಆಗಾಕಿಲ್ಲಪ್ಪ ಬೇಕಾಗಿದ್ರೆ ನಾನ್ನೊಬ್ನೆ ಸಿಕಾರಿಗೆ ಓಗಿ ನಿಂಗೊಂದು ಉಲಿ ಚರ್ಮ ತಂದ್ಕೊಟ್ಟುಬುಡ್ತೀನಿ. ಅಂತ ಸಮುಜಾಯಿಷಿ ಏಳ್ದೆ."

" ಅವನು ಒಪ್ಕೊಂಡ್ನೋ ."

" ಉಹುಂ. ಅವ ಒಪ್ಕೊಂಡಿದ್ರೆ ನಾನು ಆವನ ಸಮಾಧಿ ತಾವು ಒಂದು ಗುಂಡು ಆರ್ಸೋ ಪಂಚಾತ್ಕೆ ಎಲ್ಲಿರ್ತಿತ್ರಿ ? ಅವನ್ಗೆ ನನ್ಕೂಟೆ ಬಂದು ಸಿಕಾರಿ ಮಜಾ ನೋಡ್ಬೇಕು ಅನ್ನೋ ಉಚ್ಚು ಆಸೆ. ಪಟ್ಟು ಇಡಿದೇ ಬುಟ್ಟ. ಸುಬೇದಾರ್ರು ಬಂದು ನಮ್ಮೂರಿನ ಮಾನ ಬಚಾಯಿಸ್ಬೇಕು ಎಂಕ್ಟಪ್ಪನೋರೆ ಅಂತ ಕೇಳ್ಕೊಂಡ್ರು. ನಾನೇನು ಮಾಡಾನ ನೀವೆ ಯೋಳಿ, " ಸರಿ " ಅಂತ ಒಪ್ಕಂಡೆ ಇಲ್ದೆ ಓಗಿದ್ರೆ ಒಂದು ಜೀವಾನಾರ ಉಳ್ಕೊಂತಿತ್ತು." ಎಂದರು ಎಂಕ್ಟಪ್ಪ.

" ಅಂದ್ರೆ ನೀವು ಶಿಕಾರಿಗೆ ಹೋಗಿದ್ರಿಂದ ಅವನು ನೆಗೆದು ಬಿದ್ದ ಅಂತ ನಿಮ್ಮ ಅಂಬೋಣವೇನು...?" ನಾನು ಪ್ರಶ್ನಿಸಿದೆ.

" ಔದು. ಇಲ್ದೆ ಓಗಿದ್ರೆ ಅವ್ನು ಸಿಕಾರಿಗೆ ಓಕ್ತಾನೂ ಇರ್ಲಿಲ್ಲ. ಒಂದು ಪಕ್ಷ ಓಗಿದ್ರೂನೂನೆ, ಉಲಿ ಬಾಯ್ಗೆ ಸಿಕ್ಕೊಂತ ಇರ್ಲಿಲ್ಲ..." ಎಂದರು ಖಂಡಿತವಾದ ಧ್ವನಿಯಲ್ಲಿ.

"ಸರಿ ಮುಂದೇನಾಯ್ತು...?" ನಾನು ಮುಂದಿನ ಕಥೆಯನ್ನು ಕೇಳುವ ಕುತೂಹಲದಿಂದ ಪ್ರಶ್ನಿಸಿದೆ. ಇಷ್ಟೊತ್ತು ನಡೆಯುತ್ತಿದ್ದ ಎಂಕ್ಟಪ್ಪ ಒಮ್ಮೆಲೆ ನಿಂತರು. ಧಾರಾಕಾರವಾಗಿ ಅವರ ಮೈಯಿಂದ ಬೆವರಿಳಿಯುತ್ತಿತ್ತು. ದಾರಿಯಲ್ಲಿದ್ದ ಅರಳಿ ಕಟ್ಟೆಯನ್ನು ತೋರ್ಸಿ "ಬನ್ನಿ ಅಲ್ಲಿ ವಸಿಕುಂತ್ಕೊಳೋಣ" ಎಂದು ನನ್ನನ್ನು ಎಳೆದೊಯ್ದರು. ವಾಟರ್ ಬಾಟ್ಲಿಯಿಂದ ನೀರನ್ನು ಕುಡಿದು ಮುಂದುವರೆಸಿದರು ಎಂಕ್ಟಪ್ಪ.

"ಅವನಿಗೆ ದೊಡ್ಡ ಸಿಕಾರಿ ಉಚ್ಚೇ ಜಾಸ್ತಿ. ಮೊಲ, ಜಿಂಕೆ ಇಂತೋವ್ನ ಒಡ್ದು ಮನೆ ಸೇರ್ಕೊಳ್ಳೊವ ಅಂದ್ರೆ ಅವ ಕೇಳೋ ಮನ್ಸ ಅಲ್ಲ."

"ಅದ್ಸರಿಯೇ ದೊಡ್ಡ ಹಂಟರುಗಳು ದೊಡ್ಡ ಪ್ರಾಣಿಗಳನ್ನೇ ಕೊಲ್ಲೋದು. ಏನ್ಮಾಡಿದ್ರೂ ದೊಡ್ಡದು ದೊಡ್ಡದೆ..." ಎಂದು ನಾನು ಬಾಯಿ ಹಾಕಿದೆ.

"ಎಂಥಾ ದೊಡ್ಡದರಿ ಅವನೊಬ್ಬ ಅಂಟರೇನ್ರಿ ? ಥೂ ಇಂತೋರೆಲ್ಲ ಕಸಬಿಗೇ ಅವಮಾನ ಮಾಡೋ ನಾಮರ್ದಾಗಳು..."

"ಯಾಕೆ, ಅವನೇನಾದ್ರು ಕಾಡನ್ನ ನೋಡಿ ಹೆದರ್ಕೊಂಡ್ನೆ ?"

ಎವರ್ಕ್ಕೊಂಡಿದ್ರೆ ಲಕ್ಷಣವಾಗಿ ವಾಪ್ಸಾದ್ರು ಬಂದು ಬುಡ್ತ್ಕೋದಾಗಿತ್ತು. ಅವ ಚಿಕ್ಕ ಕಾಡು ಬೇಡ ದೊಡ್ಡ ಕಾಡ್ಗೆ ಓಗೋವ್ಪೂ ಅಂತ ರಾಂಗ್ ಮಾಡ್ಬುಟ್ಟ. ನಾನೂ ಗಿಣಿಗೆ ಏಳೋ ಅಂಗೆ ಆ ಗಿಡುಗನ್ಗೆ ಏಳ್ದಿ ನನ್ಮಾತ್ನ ಅಲಕ್ಷ್ಯ ಮಾಡ್ಬುಟ್ಟ."

"ಅಂತೂ ದೊಡ್ಡ ಕಾಡ್ಗೆ ಅವನ್ನಕರ್ಕೊಂಡು ಹೋದ್ರಿ ಅನ್ನಿ ?"

"ಅಂಗೆಲ್ಲಾ ಆ ಎಡಬಿಡಂಗಿ ಮಾತ್ನಕೇಳ್ಕೊಂಡು ಏಕಾ ಏಕಿ ಕಾಡ್ಗೆ ಓಂಟೋಗೋಕೆ ಅದೇನು ಸುಡುಗಾಡು ಕೆಟ್ಟೋಯ್ನೇನ್ರಿ. ಅದಕ್ಕೆ ಎಲ್ಲಾ ಸವಲತ್ತು ಆಗ್ಬೇಕಲ್ಲಾ. ಅಟ್ಟನಿಗೆ ಕಟ್ಕೋಬೇಕು ಬ್ಯಾಟೆಗೆ ಬಲಿ ಕಟ್ಬೋಕು. ಎಲ್ಲಾ ಸುಮ್ಕಾಯ್ತ ? ಅದೂ ಅಲ್ದೆ ಅವ ಮ್ಯಾನ್ ಈಟರನ್ನೇ ಒಡೀಬೇಕೂಂತ ಅಟ ಇಡಿದ್ಮೇಕೆ..."

"ನರ ಭಕ್ಷಕ ಹುಲಿ ನಮ್ಮೂರಿನ ಕಾಡ್ನಲ್ಲಿತ್ಯೋ...?"

"ಇಲ್ಲಿ ನಾನು ಅಂಟರಾಗಿ ಕುಂತಿರೋವಾಗ ಉಲಿಗಳು ಬದ್ಕೋಕುಂಟೇನ್ರಿ ? ಅದ್ಕೆ ನರಶೀಪುರದಿಂದ ಮುಳ್ಳೂರಿನ ಕಾಡ್ಗೆ ಅದ್ನ ತರಿಸಬೇಕಾಯ್ತು..."

"ಅಲ್ಲಿಂದ ಇಲ್ಲಿಗೆ ಹೇಗೆ ತರ್ಸಿದ್ರಿಪ್ಪ. ಬಹಳ ಆಶ್ಚರ್ಯವಾಗಿದ್ಯಲ್ಲಾ"

"ಅಯ್ ಅದೇನು ನನ್ನಂಥಾ ಸಿಕಾರಿಗೆ ದೊಡ್ಡದಲ್ರಿ. ಖೆಡ್ಡಾ ಮಾಡೋವಾಗ ಆನೆಗಳನ್ನು ಗಲಾಟೆ ಎಬ್ಸಿ. ತಮಟೆ ಸದ್ದುಮಾಡಿ ಓಡ್ಸೋಕಿಲ್ವಾ ಅಂಗೆ ಉಲೀನೂ ನರಸೀಪುರದಿಂದ ಓಡಿಸ್ಕೊಂಡು ಬರೋ ಆಗೆ ಬ್ಯಾಟೆಗಾರರಿಗೆ ಏಳ್ದೆ. ವಸಿ ಅಂದ ಎಚ್ಗೆ ಕೊಟ್ಟಿದ್ರಿಂದ ಅವ್ರುಗೋಳು ಎಲ್ಡೆ ದಿನದಾಗೆ ಮುಳ್ಳೂರಿನ ಪಾಶಲೆಂದೊಳಗೆ ಬರೋ ಅಂಗೆ ಮಾಡ್ಬುಟ್ರು. ಆಮೇಕೆ ಸೂಟಿಂಗ್ ದಿನಾನು ಫಿಕ್ಸ ಮಾಡಿದ್ದಾಯ್ತು ಇಂದಿನ ಜಿನಾನೇ ನಾನು ಮಂನುಸನ ಎಣಕ್ಕೋಸ್ಕರ ತಲಾಸೆ ಮಾಡ್ತ ಬಂದೆ..."

ಅಲ್ಲಾ ಎಂಕ್ಟಪ್ಪನವರೇ ಹುಲಿ ಶಿಕಾರಿಗೆ ಮನುಷ್ಯನ ಹೆಣ ಯಾಕೆ ಸ್ವಾಮಿ...?" ಎಂದು ಅರ್ಥವಾಗದೆ ಕೇಳಿದೆ.

"ಅಲ್ರಿ, ನಾವು ಯಾವ ಅಂಟಿಗೆಗೆ ಓಗ್ತಾ ಇದ್ದದ್ದಯೋಳ...?"

"ಹುಲಿ ಹಂಟಿಂಗೆಗೆ..."

"ಯಾವ ಉಲಿ...?"

"ನರ ಭಕ್ಷಕ ಹುಲಿ..."

"ಮತ್ತೆ ನರಭಕ್ಷಕ ಅಂದ್ಮೇಕೆ, ಅದು ಉಣ್ಣೋಕೆ ಬಂದು ಎಣಾನಾರ ಮಡಗ್ದಿದ್ರೆ ಅದು ನಮ್ಮತಾಕೆ ಬತ್ತದೇನ್ರಿ...?"

"ಓಹೋ ಬೇಟೆಯನ್ನು ಆಕರ್ಷಸೋಕೆ ಈ ಪ್ಲಾನು ಅನ್ನಿ ಶವಸಿಕ್ತೆ...?"

"ಉ ಕೇಳಿ ಯಾರೋ ಗರೀಬ್ರು ಬೇವಾರ್ಸಿ ಎಣಾನ ಮಾರ್ತಾ ಕುಂತಿದ್ರು. ಈ ಎಣಕುಯ್ಯೋ ಡಾಕ್ಟ್ರುಗೋಳು ಅದ್ನ ಆಕೋಕೆ ಮುಂಚೆ ನಾನೇ ಅತ್ತು ರೂಪಾಯಿ ಜಾಸ್ತಿ ಮಡಗಿ ಯಾಪಾರ ಮುಗ್ಸಿ, ಎಣಾನ ಕಾಡ್ಗೆ ಶಾಗಿಸ್ಕೊಂಡು ಓದೆ. ಅಲ್ಲಿ ಎದುರು ಬದರಾಗಿದ್ದ ಎಲ್ಡು ದೊಡ್ಡ ಮರಗಳ ಮೇಲೆ ಅಟ್ಟಣಿಗೆ ಆಕ್ಸಿ, ಎಣಾನ ಮದ್ಯದ ನೆಲದಾಗೆ ಮನಗ್ಸಿ. ಅದರ ಮ್ಯಾಗೆ ಕೆಂಪುಶಾಯಿ ಚೆಲ್ಲಿದೆ.

ಕೆಂಪುಶಾಯಿ ಹೆಣದಮೇಲೆ ? ಇದೇನು ಸೋಜಿಗದ ಮಾತು ಎಂಕ್ಟಪ್ಪ ನೋರೆ ?

"ನನ್ನ ಐಡಿಯಾ ನಿಮ್ಗೆ ತಿಳೀನಿಲ್ಲ. ಅಲ್ರೀ ಎಣದ. ಮೈರತ್ತ ಗಡ್ಡೆ ಕಟ್ಕೊಂಡು ಬುಟ್ಟಿರೋದ್ರಿಂದ ಉಲೀಗೆ ಅದು ಅಳಸಲು ಎಣಾ ಅಂತ ತಿಳಿದು ಬುಡೋಲ್ಲವೇನ್ರಿ ? ಅದ್ಕೆ ರೆಡ್ಡಿಂಕು ಅಚ್ಚಿದ್ರೆ ಮೈಯಿಂದ ರಕ್ತಾ ಉಕ್ಕೊ ಅಂಗೆ ಕಂಡು ಒಸಾ ಎಣ ಅಂತ ತಿಳ್ಕೊಂಡು ಡೂಪ್ ಬೀಳೋಕಿಲ್ಲವೇನ್ರಿ...?" ಎಂದು ಶಿಕಾರಿಯ ಇತಿಹಾಸದಲ್ಲೇ ಕಂಡುಬರದ ಮೇಧಾವಿ ಕತೆಯನ್ನು ಪ್ರದರ್ಶಿಸಿದರು ಎಂಕ್ಟಪ್ಪ.

ಅಲ್ಲಾ ಅದು ಇದ್ನೆಲ್ಲಾ ನೋಡುತ್ಯೇಂದ್ರೆ—?" ಎಂದು ನಂಬಿಕೆ ಬರದವನಂತೆ ಪ್ರಶ್ನಿಸಿದೆ.

"ಮಂಕೆ ಅದ್ಕೇ ಉಲಿ ಶಾಸ್ತ್ರ ಅನ್ನೋದು. ಅಂಟಿಂಗು ಅಂದ್ರೆ ಶುಮ್ಮಾಯ್ತು?" ಪ್ರಾಣಿಗೋಳ ನೇಚರ್ ಎಂಗೈತೆ ಅನ್ನೋದ್ನೆಲ್ಲಾ ಸ್ಟಡಿ ಮಾಡ್ಬೇಕಾಯ್ತದೆ.

"ಅಲ್ಲಾ ಸ್ವಾಮಿ, ಆರಾತ್ರೀಲಿ ರಕ್ತಹರೀತಿದ್ಯೋ ಇಲ್ವೊ ಅನ್ನೋದು ಹುಲೀಗೆ ಹೇಗೆ ಸ್ವಾಮಿ ಕಾಣುತ್ತೆ ?"

"ರಾತ್ರಿ ಯಾರ್ರೀ ಅಂಟಿಂಗೆಗೆ ಓಗೋರು ?"

"ಮತ್ತೆ ಬೆಳಗ್ಗೆ ಹೋದರೇನು ?"

"ಉಂ ಮಂಕೆ. ಈಗೆಲ್ಲಾ ಸಿಕಾರಿ ಗೋಳು ಭಾಳ ಮುಂದುವರ್ದು ಬುಟ್ಟವ್ರೆ. ಅಳೇ ಕಾಲದೋರ ತರ ರಾತ್ರಿನಾಗೆ ಅಂಟಿಂಗಿಗೆ ಓದ್ರೆ ನಗೋಕಿಲ್ವ ಜನ ಅದೂ ಅಲ್ದೆ ಉಲೀಗೂ ಅಂಗೆಲ್ಲಾ ಮೋಶಮಾಡಬ್ಯಾಡ್ದು. ಅದ್ಕೆ ಮದ್ಯಾಹ್ನ ಹನ್ನೆರಡು ಘಂಟೇಲಿ ಉಲಿ ದಾವ ತಠಿ ಆರ ಮಾಡ್ಕೊಳ್ಳೋಕ್ಕೆ ಕೆರೆತಾಕ್ಕೆ ಬತ್ತದಲ್ಲ ಅದೇ ಒಳ್ಳೇ ಟೇಮು. ಆಗ ಒಂದು ಅಟ್ಟಣೆಗೆ ಮ್ಯಾಕೆ ನಾನು. ಎದುರ್ಗಡೆ ಅಟ್ಟಣೆಗೆ ಮೇಕೆ ಆ ಪರಂಗಿಯೋನು, ತಲೆ ಮರಿಸ್ಕೊಂಡು ಕುಂತುಕೊಂಡ್ವಿ."

"ಅವನೂ ಬಂದೂಕು ತಂದಿದ್ದನಾ ?"

ಎಂಕ್ಟಪ್ಪನವರು ಈ ಪ್ರಶ್ನೆಯನ್ನು ಕೇಳಿ ಪಕಪಕನೆ ನಕ್ಕರು. ಇದೆಂತಹ ಮೊದ್ದು ಪ್ರಶ್ನೆ ಎಂದು ಅವರಿಗೆ ಅನ್ನಿಸಿರಬೇಕು.

"ಅಲ್ರೀ ಸಿಕಾರಿಗೆ ಬಂದೋನು ರೈಪಲ್ ತರ್ದೆ ಬರ್ತಾನೇನ್ರಿ ? ಅದೊಂದು ಒಸಮಾದರಿ ಕೋವೀನೆ ತಂದಿದ್ದ. ಕೋವೀಗೆ ಕ್ಯಾಮರಾನು ಒಕ್ಸ್ ಮಾಡಿತ್ತು. ಅದರಾಗೆ ಪೈರ್ ಮಾಡಿದ್ರೆ, ನಾವು ಯಾವುದರ ಮ್ಯಾಕೆ ಗುರಿ ಮಡಗ್ತೀವೋ ಅದ್ರ ಪೋಟೋನು ಬೀಳ್ತದೆ..."

"ಬಹಳ ಹೊಶ ನಮೂನೇದು ಅನ್ನಿ..."

"ಹೂ ಕೇಳಿ ಸಿಕಾರಿಗೋಳು ಕೋವಿಗಳ್ನ ಅದ್ಲಿ ಬದ್ಲಿ ಮಾಡ್ಕೊಳ್ಳೋ ಒಂದು ನೇಮ ಐತೆ ಮೊದ್ಲಿಂದ್ಲು. ಅದ್ಕೆ ಅವ ನನ್ನ ಕೋವಿ ತಕ್ಕೊಂಡ. ನನ್ಗೆ ಅವ್ನ ಕೋವಿ ಕೊಟ್ಟ. ಸರಿ ಠಾಕೋಠಾಕು ಅನ್ನೆರಡಕ್ಕೆಲ್ಲಾ ಉಲೀನು ಬಂತು."

"ಏನು ಹುಲಿ ಬಂತೆ.. ?" ನಾನಂ ಗಾಭರಿಯಿಂದ ಕೇಳಿದೆ.

"ಟೇಮು ಅಂದ್ರೆ ಟೇಮು. ಏನಂತ ಅನ್ಕಂಡ್ರಿ. ಉಲಿ ಕಳ್ಳ ಎಜ್ಜೆ ಆಕ್ಕೊಂಡೇ ಬಂತು. ಎಡಾನ ನೋಡ್ಲೆ ಇಲ್ಲ. ಒಂದಪ ಮೇಲೆ ಕುಂತಿದ್ದನನ್ನೂ, ಇನ್ನೊಂದಪ ಎದುರ‍್ಗಡೆ ಮರದ ಮ್ಯಾಕೆ ಕುಂತಿದ್ದ ಪರಂಗಿಯೋನ್ನೂ ನೋಡ್ತು. ಪರಂಗಿಯೋರ‍್ನ ಕಂಡ್ರೆ ಅದ್ಕೂ ಆಗಾಕಿಲ್ಲೊ ಏನೋ ಗುರ್ ಅಂತ ಗುಟ್ರು ಆಕಿ, ಅವನ ಕಡೆಗೆ ಬಾಯಿ ತಕ್ಕೊಂಡು ನಿಂತ್ಕೊಂತು ಅದೇ ಟೇಮ್ಗೆ ನನ್ಗೂ ಚಳಿ ಜರ ಬಂದಂಗಾಯ್ತು. ಆದ್ರೂ ಸವರಿಸ್ಕೊಂಡು ಗುಂಡು ಆರಿಸ್ಬುಟ್ಟೆ. ಏನಾಯ್ತು ಅಂತ ನೋಡ್ತೀನಿ. ಅಯ್ಯಪ್ಪೊ ಅಂತ ಅರಚ್ಕೊಂಡು. ಉಲಿ ಬಾಯ್ಗೆ ನೇರವಾಗಿ ತಲೆ ಕೊಟ್ಕೊಂಡು ಪರಂಗಿಯೋನು ಬಿದ್ದು ಬುಟ್ಟವನೆ. ಅವನ ಎದೆಯಾಗಿಂದ ರಕ್ತ ಬಸೀತಿತ್ತು ಉಲೀಗೂ ಒಂದು ಘಳ್ಗೆ ಗಾಬ್ರಿ ಆಯ್ತೋ ಏನೋ. ಆವ್ಯಾಕೆ ಅವನ ತಲೇನ ಅಂಗೆ ಬಾಯ್ನಾಗೆ ಮಡೀಕೊಂಡು ಓಡಿ ಒಂಟೋಯ್ತು..."

"ಅಯ್ಯೊ ಪಾಪಿ..."

"ಏನ್ಮಾಡೋಕಾಯ್ತದೆ. ಅಂಟಂಗು ಅಂದ್ರೆ ಸುಮ್ಮಾಯ್ತ. ಎಲ್ಡುದಿನ ಬುಟ್ಕೊಂಡು ನಾನು ಕಾಡ್ನಾಗೆಲ್ಲಾ ತಡಕಿ ಒಂದು ದೊಡ್ಡ ಎಮ್ಕೆ ಎತ್ಕೊಂಡು ಬಂದೆ. ಅದ್ನೆ ಊತು ಆ ಪರಂಗಿಯೋನ್ಗೆ ಈ ಶಮಾಧಿ ಕಟ್ಟಿಸ್ದೆ. ಯಾಕೇಂದ್ರೆ ಅವ ದೆಯ್ಯ ಆಗಿ ಅಲೀತಿದ್ರೆ ನಂಗ್ಮಾನೆ ತಕಲೀಫ್..."

"ಸರಿಯೇ ಅವನ ವಾರಸದಾರರು ಯಾರು ಬರ‍್ಲಿಲ್ವೋ..."

"ಉಹುಂ ಸುಬೇದಾರ‍್ರು ಎಲ್ಲಾ ಇಚಾರ‍್ಸಿ ಅವನ್ಗೆ ಯಾರೂ ವಾರಸುದಾರ‍್ರು ಇಲ್ಲಾಂತ ತಿಳಿದ್ಮೇಕೆ, ಅವನ ರೈಪಲ್ಲು, ವಾಟರ್‌ಬಾಟ್ಲೆ, ಒಂದು ರೌಂಡ್ ತೋಟಾ ಎಲ್ಲಾನೂವೇ ಸರ‍್ಕಾರಕ್ಕೆ ಮುಟ್ಟುಗೋಲು ಆಕ್ಕೊಂಡು ಬುಟ್ರು. ಅವನ ಗುರುತಾಗಿ ನಂಗೂ ಏನೂ ಕೊಡ್ಲಿಲ್ಲ."

"ಛೆ ಛೀ ನಿಮಗೇನಾದ್ರು ಕೊಡ್ಬೇಕಾಗಿತ್ತು. ಅವನ ಪೋಟೋನಾರ ಇದ್ದಿದ್ರೆ ನಿಮಗೆ ಮನಸ್ಸಿಗೆ ಸ್ವಲ್ಪ ಸಮಾಧಾನವಾಗ್ತಹುದಾಗಿತ್ತು."

"ಅವ್ನ ಪೋಟೋ ಏನೋ ನನ್ತಾವು ಐತೆ ಅಂತಿಟ್ಕೊಳ್ಳಿ. ನಾನು ರೈಪಲ್ ಮ್ಯಾಗಿನ ಕ್ಯಾಮ:ರಾದೊಳಗಿಂದ ಫಿಲಂನ ತೆಗೊಂಡು ತೊಳಿಸಿದಾಗ, ಅವನ ಪೋಟೋ ಅಟ್ಟಣಿಗೆ ಮ್ಯಾಕೆ ಕುಂತಿರೋದು ಸಿಕ್ತು, ಬಾಳಾ ಸೆಂದಾಗಿ ಬಂದೈತೆ. ಅದ್ನ ರೊಟ್ಟಿನ ಮ್ಯಾಗೆ ಅಂಟ್ಸಿ, ಆಲಿನ ಗೋಡೆ ಮ್ಯಾಗೆ ನೇತು ಹಾಕಿವ್ನಿ. ಬರ‍್ರಿ ಮನೆಗೆ ಓಗೋವ " ಎಂದು ಹೇಳಿ ಅರಳಿ ಕಟ್ಟೆಯನ್ನು ಬಿಟ್ಟು ಮೇಲೆದ್ದರು. ಎಂಕ್ಟಪ್ಪ.

ಅವರ ಕೈಲಿದ್ದ ಲೋಡುಮಾಡಿದ ರೈಫಲ್ಲನ್ನು ಉಪಾಯವಾಗಿ ಕಸಿದುಕೊಂಡು ನಾನೇ ಅದನ್ನ ಹೊತ್ತುಕೊಂಡು ಧೈರ‍್ಯವಾಗಿ ಅವರನ್ನು ಹಿಂಬಾಲಿಸಿದೆ.

ಆ ವಾಕ್ಚಿತ್ರದ ಕಥೆ


ಇತ್ತೀಚೆಗೆ ಒಬ್ಬ ಸುಪ್ರಸಿದ್ಧ ಸಿನಿಮಾ ಡೈರೆಕ್ಟರು, ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡುತ್ತಾ—ಚಲನಚಿತ್ರ ವಿಮರ್ಶೆಗಾರರು ತಮ್ಮ ಅರ್ಧಂಬರ್ಧ ತಿಳುವಳಿಕೆ ಚಲನಚಿತ್ರಗಳನ್ನು ವಿಮರ್ಶೆಮಾಡುವುದಕ್ಕಿಂತಲೂ, ಚಿತ್ರದ ಕಥೆಯನ್ನು ಮಾತ್ರ ವಾಚಕರಿಗೆ ವರದಿ ಮಾಡಿದರೆ ಎಷ್ಟೋ ನೆಮ್ಮದಿ—ಅಂತ ಹೇಳಿದರು. ಇದೇ ರೀತಿ ನಮ್ಮ ಚಲನಚಿತ್ರ ವಿಮರ್ಶೆಗಾರರು ತಾವು ಮೊನ್ನೆ ನೋಡಿದ ಒಂದು ಚಿತ್ರದ ಕಥೆಯನ್ನು ಬರೆದು ಕಳುಹಿಸಿದ್ದಾರೆ.

"ಪ್ರೇಮಕರ್ಮ"—ಚಲನ ಚಿತ್ರದ ಕಥೆ, ಮದ್ರಾಸು, ಬಾಂಬೆ, ಕುರಂಗು ಪಾಳ್ಯಂ ಮತ್ತು ಲಂಡನ್‌ಗಳನ್ನು ಆವರಿಸಿದೆ. ಧನಿಕನಾದ ಅಶೋಕ, ಸೇವಕಿ ಲತಾಳನ್ನು ಪ್ರೀತಿಸುತ್ತಾನೆ. ಅಂದರೆ, ಸೇವಕಿ ಅಂತ ಅವನು ತಿಳಿದುಕೊಂಡಿರುವ ಲತಾಳನ್ನು ಪ್ರೀತಿಸುತ್ತೇನೆ ಅಂತ ಭ್ರಮೆಪಟ್ಟಿದ್ದಾನೆ. ನಿಜವಾಗಿ ಲತಾ-ಲತಾ ಅಲ್ಲವೇ ಅಲ್ಲ. ಅವಳು ಚಿಕ್ಕಂದಿನಲ್ಲಿ ತನ್ನ ತಂದೆ ಜಮೀನ್ದಾರ್ ಜಗನ್ನಾಥನಿಂದ ತ್ಯಜಿಸಲ್ಪಟ್ಟ ತಾಯಿ (?) ಗೌರಿಯ ಮಗಳು ಸಕ್ಕು. ಲತಾ ಅಂತ ಹೆಸರಿಟ್ಟುಕೊಂಡು ಗಜೇಂದ್ರ ರಾಯರ ಮನೆಯಲ್ಲಿ ಕೆಲಸಕ್ಕಿದ್ದಾಳೆ. ಲತಾ-ಸತೀಶನಿಗೆ ಮಾರುಹೋಗಿದ್ದಾಳೆ. ಆದರೆ ಸತೀಶ ರೀಟಾಳಲ್ಲಿ ಅನುರಕ್ತನಾಗಿದ್ದಾನೆ. ರೀಟಾ ಸತೀಶನನ್ನು ತಿರಸ್ಕರಿಸಿ, ಗಿರೀಶನನ್ನು ಮೋಹಿಸುತ್ತಾಳೆ. ಆದರೆ ಅವಳ ಮದುವೆ ಗಿರೀಶನ ಚಿಕ್ಕಪ್ಪನೊಂದಿಗೆ ನಿಶ್ಚಯವಾಗಿದೆ. ಈ ಮಧ್ಯೆ ರಮೇಶ ಇಂಗ್ಲೆಂಡಿನಿಂದ ಬ್ಯಾರಿಸ್ಟರಾಗಿ ಬರುತ್ತಾನೆ. ರಮೇಶ ಗಜೇಂದ್ರರಾಯರ ಸಾಕು ಮಗ. ಅವನಿಗಾಗಿ ಶಶಿ ಅಂದರೆ ಸತೀಶನ ಮತ್ತೊಬ್ಬ ಪ್ರೇಯಸಿ ಕಾದಿರುತ್ತಾಳೆ. ರಮೇಶ ಇಂಗ್ಲೆಂಡಿನಿಂದ ಬಂದವನೇ ಮಿಸ್ ರೋಮಿಯ ಜೊತೆ ಬೃಂದಾವನಕ್ಕೆ ಹೊರಟುಹೋಗುತ್ತಾನೆ. ಅಲ್ಲಿ ಇಬ್ಬರೂ ಕಣ್ಣು ಮುಚ್ಚಾಲೆಯಾಡುತ್ತಾರೆ. ಅಶೋಕ ರಮೇಶನನ್ನು ಥಳಿಸುತ್ತಾನೆ. ರೀಟಾ ಗಂಡುವೇಷ ಧರಿಸಿ ರೋಮಿಯ ಜೊತೆ ಬಾಂಬೇಗೆ ಓಡಿಹೋಗುತ್ತಾಳೆ. ಬಾಂಬೇಲಿ ಅಶೋಕ ಮತ್ತು ಅವನ ಸ್ನೇಹಿತ ಕ್ಯಾಪ್ಟನ್ ಟಾಂ ಟಾಂ ಹೆಲಿಕಾಪ್ಟರ್‌ನಲ್ಲಿ ಏರಿ ಪ್ಯಾರಷೂಟ್‌ನಲ್ಲಿ ಕೆಳಗಿಳಿಯುತ್ತಾರೆ. ಇತ್ತ ರಮೇಶ ಮತ್ತು ಶಶಿ ಪನಗಲ್ ಪಾರ್ಕಿನಲ್ಲಿ ಗೀತೆ ಹಾಡುತ್ತಾರೆ. ಆದರೆ ಸತೀಶ ಅಲ್ಲಿಗೆ ಬಂದು ರಮೇಶನನ್ನು ಥಳಿಸುತ್ತಾನೆ. ರಮೇಶ ಸತೀಶನನ್ನು ಥಳಿಸುತ್ತಾನೆ. ಆಗ ಪಾರ್ಕಿನ ತೋಟಗಾರ

ಓಡಿಬರುತ್ತಾನೆ. ಆವನೊಬ್ಬ ಮುದುಕ ತನ್ನ ವೇಷ ಬದಲಾಯಿಸಿ ನಗುತ್ತಾನೆ. ಆಗ ರೀಟಾ ಗಂಡುವೇಷಧಾರಿಯಾಗಿ ಬಂದು ಗುಂಡುಹಾರಿಸುತ್ತಾಳೆ. ಮುದುಕ —"ಹಾ ರಾಂ, ಹಾ ರಾಂ" ಅಂತ ಸಾಯುತ್ತಾನೆ. ಶಶಿ ಹುಚ್ಚಾಗುತ್ತಾಳೆ.

ಇತ್ತ ಅಶೋಕ ಬಾಂಬೇ ಬೀಚಿನಲ್ಲಿ ಎಳನೀರು ಕುಡಿಯುತ್ತಿರುತ್ತಾನೆ. ಆಗ ಎಳನೀರು ಮಾರುವವನು ಹರಾತ್ತನೆ ಚೂರಿ ತೋರಿಸುತ್ತಾ—ನಾನೇ ಜಗನ್ನಾಥ! ಅಂತ ಅರಚುತ್ತಾನೆ. ಅಶೋಕ ಎಳನೀರಿನ ಕರಟವನ್ನು ಆತನ ತಲೆಯಮೇಲೆ ಒಡೆದು ಓಡುತ್ತಾನೆ. ರಮೇಶ ಅಶೋಕನನ್ನು ಹಿಡಿಯುತ್ತಾನೆ. ಇಬ್ಬರೂ ಒಬ್ಬರಿಂದೊಬ್ಬರು ಥಳಿಸಿಕೊಳ್ಳುತ್ತಾರೆ. ಈ ಮಧ್ಯೆ ಇಂಗ್ಲೆಂಡಿನಿಂದ ಡಾಕ್ಟರ್ ಪದವಿ ಪಡೆದು ಮಾಧುರಿ ಬರುತ್ತಾಳೆ. ಅವಳನ್ನು ಭೇಟಿ ಮಾಡಲು ರಮೇಶ ಏರೋಡ್ರೋಮಿಗೆ ಹೋಗುತ್ತಾನೆ. ಆದರೆ ರಮೇಶ—ರಮೇಶ ಅಲ್ಲವೇ ಅಲ್ಲ. ಗಿರೀಶನು ಮೋಸಕ್ಕಾಗಿ ಮಿಸ್ ರೋಮಿಯ ಪ್ರೇರಣೆಯ ಮೇಲೆ ಸತೀಶನನ್ನು ಡಂಗು ಬಡಿಸಲು ರೀಟಾಳ ಅಣ್ಣ ಥಾಮಸ್ (ಇವನ ನಿಜವಾದ ಹೆಸರು ತಿಮ್ಮರಾಯ ಅಷ್ಟೆ!) ನಿಂದ ಬಟ್ಟೆಗಳನ್ನು ಹೊಂದಿ ಅಶೋಕನನ್ನು ಚೆನ್ನಾಗಿ ಥಳಿಸಿ ನಾನೇ ರಮೇಶ್ ಅಂತಾ—ಆದರೆ ಅದನ್ನು ಶಶಿ ಪ್ರತಿಭಟಿಸಿ ರಮೇಶನನ್ನು ಹುಡುಕುತ್ತಾಳೆ. ಆಗ ಲತಾ ಬರುತ್ತಾಳೆ, ಅವಳ ಜೊತೆ ಗಂಡುವೇಷಧಾರಿಯಾಗಿ ಶಶಿಯೂ ಬರುತ್ತಾಳೆ. ಏಕೆಂದರೆ Well look here ನೀವೇ ಏಕೆ ಇದನ್ನು ನೋಡಬಾರದು ?

—ಕೇಷ



ಪಾಕೀಸ್ಥಾನ ಯುದ್ಧ ಮಾಡ್ತಾರೆ ಅಂತೀರಾ ;
ಸೈನ್ಯದ ಕಂಟ್ರಾಕ್ಟ್ ಹಿಡೀಲಾ ?

ಷೇಕ್ ಅಬ್ದುಲ್ಲಾ ಕಂಬಳಿ

" ಈ ಕೆರೆ ನಮ್ಮೂರಿನದಯ್ಯಾ ! ನಮಗೆಲ್ಲ ತಂಪುಮಾಡುತ್ತಯ್ಯಾ ! ಈ ಕೆರೆಯನ್ನು ಕಾಪಾಡುವ ಹೊಣೆ ನಮ್ಮೆಲ್ಲರದೂನೂ, ನಾವೆಲ್ಲ ಒಂದಾಗಿ ರಕ್ಷಿಸಬೇಕಯ್ಯ, ಈ ಕೆರೇನ " ಎಂದೆಲ್ಲಾ ಉಪದೇಶಮಾಡಿದರು, ಷೇಕ್ ಅಬ್ದುಲ್ಲಾವಿಗೆ. " ಒಪ್ಪಿದೆ ನಾನು, ಈ ಮಾತನ್ನ. ಈ ಕೆರೇನ ಹುಷಾರಾಗಿ ನಾವೆಲ್ಲಾ ಒಂದಾಗಿ ಕಾಪಾಡಬೇಕು " ಎಂದರು ಷೇಕ್ ಅಬ್ದುಲ್ಲಾ.

" ಯಾತ್ರೆಗೆ ಹೋಗಿ ಬರ್‍ತೀನಿ. ಅಲ್ಲಾನ ದೃಷ್ಟಿಯಲ್ಲಿ ಮಾನವರೆಲ್ಲ ಒಂದು " ಎಂದು ಅಮರನುಡಿ ನುಡಿದ ಹಜರತ್ ಪೈಗಂಬರರ ಆದೇಶದಂತೆ " ಯಾತ್ರೆಮಾಡಿ ಬರ್‍ತೀನಿ " ಎಂದರು ಷೇಕ್ ಅಬ್ದುಲ್ಲಾ.

ಸರಿ. ಹೊದ್ದುಗೊಳ್ಳಲು ಪಾಸ್‌ಪೋರ್ಟ್ ಕಂಬಳಿಯನ್ನು ಅವರಿಗೆ ಕೊಟ್ಟರು. ಪ್ರವಾಸಕ್ಕೆ ಎಲ್ಲಾ ಅನುಕೂಲಗಳನ್ನೂ ಮಾಡಿಕೊಡಲಾಯಿತು. " ಊರಿಗೆ ಮಾರಿ, ಪರರಿಗೆ ಉಪಕಾರಿ " ಎನ್ನುವ ನೀತಿಯನ್ನು ಅನುಸರಿಸುವ ರಿಸರ್ವ್ ಬ್ಯಾಂಕಿನವರು ಕೈತುಂಬಾ ಹಣವನ್ನು ಧಾರಾಳವಾಗಿ ಷೇಕರಿಗೆ ಕೊಟ್ಟರು. " ಅಲ್ಲಾ ಹೋ ಅಕ್ಬರ್ " ಅಂತ ಷೇಕ್ ಅಬ್ದುಲ್ಲಾ ಊರುಬಿಟ್ಟರು.

ಊರುಬಿಟ್ಟು ಹೋದ ಮೇಲೆ ಕೆರೆಯ ಕಟ್ಟೆಯ ಕಲ್ಲುಗಳನ್ನು ಸಡಿಲಿಸಲು ಷೇಕರು ಮುಂದಾದರು. ಮಾತಿನ ಹಾರೆ, ನುಡಿಯ ಗುದ್ದಲಿ, ಶತ್ರುಗಳೊಡನೆ ಭೇಟಿಮಾಡುವ ಪಿಕಾಸಿ, ಇವುಗಳನ್ನು ಧಾರಾಳವಾಗಿ ಉಪಯೋಗಿಸಿದರು.

ಕೆರೆಯ ಕಟ್ಟೆಯು ಒಡೆಯುವ ಸ್ಥಿತಿಗೆ ಬಂತು. ಆಗ ಊರಿನವರಿಗೆ ಕೋಪ ಬಂತು. ರೇಗಿದರು. ಹೀಗೆಲ್ಲಾ ಅವ ಮಾಡಬಾರದು. ಹಾಗೆಲ್ಲಾ ಅವ ಮಾತ ನಾಡಕೂಡದು. ಎಂದೆಲ್ಲಾ ಬೊಬ್ಬೆಹಾಕಿದರು. ಆದರೆ ಏನು ಮಾಡಬೇಕು ?

ಕೆರೆ ಒಡೆದವನ ಹತ್ತಿರ ಕಿತ್ತುಕೊಳ್ಳೋದು ಏನನ್ನು ?

ಲಾಗಾಯ್ತಿನಿಂದ ರೂಢಿಗೆ ಬಂದುದು, ಅವನ ಕಂಬಳಿ ಕಿತ್ತುಕೊಳ್ಳೋದು ! ಸರಿ ! ಪ್ಯಾಸ್ ಪೋರ್ಟ್ ಕಂಬಳಿಯನ್ನು ಕಿತ್ತುಕೊಂಡರು. ಇನ್ನು ಮೇಲೆ ಕೆರೆ ದುರಸ್ತನ್ನು ಮಾಡಬೇಕು.

ಅಮೇರಿಕಾ ಆಹ್ವಾನ

★

ವೆಂಕಟಪ್ಪನ ಮದುವೆ ಆದಾಗ, ತಿಟ್ಟಿಹಳ್ಳಿ ತಿಮ್ಮಕ್ಕ ಬಂದಿದ್ದಳು. "ನಿನ್ನ ಗಂಡನ ಮನೆಯೋರು, ನಮ್ಮ ಮನೆಯೋರು ಇಬ್ಬರೂ ಒಂದೇ ತಿಟ್ಟಿನಲ್ಲಿ ವಾಸ ವಾಗಿದ್ದೆವು ಕಣೆ. ಎಷ್ಟು ದಿವಸ ಆಗಿತ್ತೆ, ನಿನ್ನ ನೋಡಿ, ವೆಂಕಟು ಮದುವೆ ನೆಪ ದಲ್ಲಾದರೂ ನಿನ್ನ ನೋಡುಕ್ಕೆ ಆಯಿತಲ್ಲ. ನೆಂಟತನ ಸಂಬಂಧ ಎಲ್ಲಾನೂ ಬೆಳೆಸಿದ ರೇನೇ ಉಳಿಯೋದು, ಬಿಟ್ಟುಬಿಟ್ಟರೆ ಮುರಿದೇ ಹೋಗುತ್ತೆ. ಇನ್ನೊಂದು ಸಲ ನಮ್ಮೂರಿಗೆ ನೀ ಬರಲೇಬೇಕು. ಗಂಡ ಮಕ್ಕಳನ್ನೂ ಕರಕೊಂಡು ಬರಬೇಕು. ಬಂದು ನಮ್ಮನೇಲಿ ಒಂದು ವಾರ ಇದ್ದು ಹೋಗಬೇಕು" ಎಂದು ರಂಗಜ್ಜಿ ತಿಮ್ಮಕ್ಕನ್ನ ತಬ್ಬಿಕೊಂಡು ಆದರದಿಂದ ಆಹ್ವಾನಿಸಿದಳು.

ಮದುವೆ ಮುಗೀತು. ತಿಟ್ಟಿಹಳ್ಳೀಗೆ ತಿಮ್ಮಕ್ಕ ಹೋದಳು. ಬೆಟ್ಟದಪುರಕ್ಕೆ ರಂಗಜ್ಜಿ ಬಂದಳು. ಆದರೆ ಮದುವೆ ಮನೆ ಆಹ್ವಾನ ತಿಮ್ಮಕ್ಕನ ಕಿವೀಲಿ ಉಳಿ ಯಿತು. ಹಾಗೂ ರಂಗಜ್ಜಿ ಮೊಮ್ಮಗಳನ್ನ ತಿಮ್ಮಕ್ಕನ ಕೊನೆ ಮಗನಿಗೆ ಕೊಡಬೇಕು ಎಂಬ ಆಸೆ ರಂಗಜ್ಜಿಯಲ್ಲಿ ಮೊಳಕೆ ಹೂಡಿತ್ತು.

ತಿಟ್ಟಿಹಳ್ಳಿ ತಿಮ್ಮಕ್ಕನ ಮನೆಯಲ್ಲಿ ಗಲಾಟೆಯೋ ಗಲಾಟೆ. ಕೊನೆ ಮಗ, ಷಹರಿನಲ್ಲಿ ಓದುಕ್ಕೆ ಹೋಗಿದ್ದವನು, ರೈಲು ತಪ್ಪಿದ ಗಾಡಿ ಹಾಗೆ ಆಗಿದಾನೆ ಅಂತ ಸುದ್ದಿ ಹರಡಿತ್ತು. ಛಿಂದುಳ್ಳಿ ಹುಡುಗ, ಓದಿದ ಹುಡುಗ. ಹಣವಂತರ ಮನೆ ಹುಡುಗ, ಷಹರಿನಲ್ಲಿ ಕಾಲುದಾರಿ ಬೀಳೋದು ಸಹಜ. ಆದುದರಿಂದ ಬೇಗ ಇವನ ಕತ್ತಿಗೆ ಒಂದು ಕೊರಡು ಕಟ್ಟಿಹಾಕಿದರೆ, ಸಮ ಸಮ ನಡಕೋತಾನೆ ಅಂತ ತಿಮ್ಮಕ್ಕ ಗಂಡನೊಂದಿಗೆ ಮಾತಾಡಿ ತೀರ್ಮಾನಿಸಿದ್ದಳು. ಅಷ್ಟೇ ಅಲ್ಲದೆ, ಮೊದಲ ಮಗ ಹಿಂದಿ ಕನ್ಯೆಯನ್ನು ಮದುವೆಯಾದಾಗಿನಿಂದ, ಎರಡನೆ ಮಗ ತಮಿಳು ಶೆಲ್ವಿಯನ್ನು ಕಲ್ಯಾಣವಾದಾಗಿನಿಂದ, ಮನೆಯಲ್ಲಿ ಸ್ವಲ್ಪ ತಿಸ್ರ ವಕ್ಕರಿಸಿತ್ತು. ಭಾಷೆ ಕೊಟ್ಟು ಮದುವೆಯಾದ ಗಂಡ, ನಮ್ಮ ನಮ್ಮ ಭಾಷೇಲಿ ಪ್ರೇಮಿಸಬೇಕೆ ಹೊರತು, ಬೇರೆ ಯಾವುದೋ ಸವತಿ ಭಾಷೇಲಿ ಮಾತಾಡಿಸಿದರೆ ಹೇಗೆ ಅಂತ ಸೊಸೆಯರ ತಕರಾರು. ಬಿಸಿಯ ವೇಳೆಗೆ ಸಿಕ್ಕಿದ್ದುಡುಗಿಯ ವಶವ ಮಾಡಿಕೊಳ್ಳುವ ವಿಧಾನ ಒಂದೇ : ಅವರು ಹೇಳಿದ ಹಾಗೆ ಕುಣಿಯುವುದು. ಈ ಮರ್ಮವನ್ನು ಮೊದಲ ಮಕ್ಕಳಿಬ್ಬರೂ ಮೆಲ್ಲಮೆಲ್ಲಗೆ ಕಲಿತಿದ್ದರು. ಎಂದಿದ್ದರೂ ಈ ಮಕ್ಕಳು ಹೆಂಡತೀರ ಮಾತು ಕೇಳಿ

ಕೊಂಡು. ತಮ್ಮ ಪಾಲಿನ ಆಸ್ತಿ ತೊಗೊಂಡು ಬೇರೆ ಊರಿಗೆ ಹೋಗಿಬಿಡ್ತಾರೆ ಅಂತ ತಿಮ್ಮಕ್ಕನಿಗೂ. ಆಕಿ ಗಂಡನಿಗೂ ಅನ್ನಿಸಹತ್ತಿತ್ತು. ಆದ್ದರಿಂದ ಕೊನೆ ಮಗನಿಗೆ ತಮ್ಮ ಕಡೆಯ ಕನ್ನಡದ ಹುಡುಗಿಯನ್ನೇ ಬೇಗ ಕಟ್ಟಿದರೆ, ಅವನಾದರೂ ಉಳಕೋ ತಾನೆ ಮನೇಲಿ ಎಂಬ ಆಸೆ. ಆದುದರಿಂದಲೇ ಎಲ್ಲ ಯೋಚನೆಮಾಡಿ, ತಿಟ್ಟಿಹಳ್ಳಿ ತಿಮ್ಮಕ್ಕ ರಂಗಜ್ಜೀಗೆ ಒಂದು ಕಾಗದ ಹಾಕಿಸಿದಳು. "ಮುಂದಿನ ತಿಂಗಳು ನಿಮ್ಮೂರಿಗೆ ಬರೋಣ ಅಂತ ತೀರ್ಮಾನಿಸಿದ್ದೀನಿ. ಹೇಗೂ ಚಾಮುಂಡಿ ಬೆಟ್ಟಕ್ಕೆ ಹರಕೆ ಒಪ್ಪಿಸಲು ಹೋಗ್ತಾ ಇದ್ದೀನಿ. ದಾರೀಲಿ ನಿಮ್ಮನ್ನೂ ನೋಡಿಕೋಡು ಹೋಗೋಣ ಅಂತ ಇದ್ದೀನಿ. ಶನಿವಾರ ಸಂಜೆ ಬರ್ತೀನಿ. ಒಂದು ನಾಲ್ಕು ದಿನ ಇದ್ದು ಬುಧುವಾರ ಹೊರಡೋಣ ಅಂತ ಸದ್ಯದ ಏರ್ಪಾಡು" ಅಂತ ಕಾಗದ ಬರೆಸಿ ಹಾಕಿಸಿದಳು.

ಬೆಟ್ಟದಪುರದ ರಂಗಜ್ಜಿ ಮನೇಲಿ ಏನಾಗಿದೆ? ಅಂತ. ಯಾರೋ ಬಂದು ಹೇಳಿದ್ದರು:—ತಿಟ್ಟಿಯಳ್ಳಿಯವರ ಮನೆ ಬದುಕು ಅಷ್ಟು ಪಸಂದಿಲ್ಲ. ಮನೆ ಸೊಸೆಯಂದಿರೇ ಬೇರೆ ಬೇರೆ ಭಾಷೇಲಿ ಬೈದಾಡ್ತಾ ಇದ್ದಾರೆ. ಅಲ್ಲದೆ ನೆರೆಹೊರೆಯವರೊಂದಿಗೆ ಕದನಕುತೂಹಲಿಗಳಾಗಿದ್ದಾರೆ. ಇಂತಹ ಮನೆಗೆ ನಮ್ಮ ಹುಡುಗೀನ ಕೊಡೋದು ಒಳ್ಳೆಯದಲ್ಲವೇನೋ? ಎಂಬ ಅನುಮಾನ ಹುಟ್ಟಿತ್ತು. ನಾಲ್ಕು ಕಡೆ ವಿಚಾರಿಸೋಣ, ಆ ಮೇಲೆ ನಿರ್ಧರಿಸೋಣ ಅಂತ ಅನ್ನಿಸಿತ್ತು. ತಿಮ್ಮಕ್ಕನ ಕಾಗದ ಬಂದಾಗ ರಂಗಜ್ಜೀಗೆ ತೊಂಚಾವಂಚ. ಈಗಲೇ ಆಕೆ ಬಂದು ಬಿಟ್ಟು ನಮ್ಮ ಹುಡುಗಿ ನೋಡಿದಾಗ, ನಿಮ್ಮ ಹುಡುಗನಿಗೆ ತಂದುಕೋತೀರಾ ಅಂತ ಕೇಳದೆ ಇರುಕ್ಕೆ ಆಗುಲ್ಲ. ಕೇಳಿದಾಗ ಆಕೆ ಹ್ಞೂ ಅಂದುಬಿಟ್ಟರೆ!

ಅದಕ್ಕೇ ಒಂದು ಉಪಾಯ ಹೂಡಿದಳು ರಂಗಜ್ಜಿ. ಮಾರೋಲಿ ಬರೆಸಿದಳು. "ಹೀಗೆ ಹೀಗೆ ತಿಮ್ಮಕ್ಕ, ನಮ್ಮನೇಲಿ ನೀಗ್ರೋ ಪುರುಡು ಬಂದಿದೆ ವಿಯಟ್ನಾಂ ಸೂತಕ ಅಂಟಿಕೊಂಡಿದೆ. ಅಲ್ಲದೆ "ಇವರ" ಎಂಭತ್ತನೆ ಹುಟ್ಟಿದ ಹಬ್ಬ. ಪೂಜೆ ಪುನಸ್ಕಾರ. ಕೋಳಿ ಬಲಿ, ಇತ್ಯಾದಿ ಶಾಂತಿ ಏರ್ಪಡಿಸಬೇಕು. ಈ ಗಲಾಟೆ ಸಮಯದಲ್ಲಿ ನೀವು ಬಂದರೆ. ಆದರಾತಿಥ್ಯಗಳನ್ನು ಮಾಡುವಾಗ ಲೋಪದೋಷಗಳುಂಟಾಗಬಹುದು. ಕಾರಣ ನಿಮ್ಮ ಭೇಟಿಯ ಪ್ರವಾಸವನ್ನು ಸ್ವಲ್ಪ ದಿನ ಮುಂದಕ್ಕೆ ಹಾಕಿ" ಎಂದು ಒಕ್ಕಣೆ ಹೂಡಿದ್ದಳು ನಯವಿನಯದ ಮಾತುಗಳ ಮಾಲೆಯ ಪತ್ರ.

ತಿಮ್ಮಕ್ಕನಿಗೆ, ರಂಗಜ್ಜಿ ಕಾಗದ ತಲುಪಿದಾಗ, "ಪಾಪ, ಅವರ ಮನೇಲಿ ಅನಾನುಕೂಲ ಇರೋವಾಗ ನಾವು ಹೋಗೋದು ತಪ್ಪು" ಅಂತ ಸಹಜವಾಗಿ ಅನ್ನಿಸಿತು. ಆದರೆ ಹಿಂದೀ ಕನ್ಯೆ ಸುಮ್ಮನಿರಬೇಕಲ್ಲ! "ಸಾಸಮ್ಮ, ನೀವು ಹೋದರೆ ಅವರಿಗೆ ಅನಾನುಕೂಲ! ಆದರೆ ಕೋರಿಯ ಹಳ್ಳಿಯವರಿಗೆ ಆಹ್ವಾನ ಇದ್ದೇ ಇದೆಯಲ್ಲ" ಎಂದು ಕುಹಕ ಆಡಿದಳು ತಮಿಳು ಶೆಲ್ವಿ ಸುಮ್ಮಗಿದ್ದಳು ಅಂತಲೇ?

ನಮ್ಮ ಪಕ್ಕದ ಮನೆಯವರ ಅಯ್ಯನಿಗೂ ಬಾ ಅಂತ ಬರೆದಿದ್ದರಂತೆ. ಅವನಿಗೂ ಪತ್ರ ಬರೆದು ಈಗ ಬರೋದು ಬೇಡ. ಮುಂದೆ ಬನ್ನಿ" ಅಂತ ಬರೆದಿದ್ದಾರಂತೆ, "ಅವರನ್ನು ಬೇಡ ಅಂದು, ನಿಮ್ಮನ್ನ ಬಾ ಅಂದರೆ, ಅವರೇನಾದರೂ ತಿಳಿದುಕೊಳ್ಳಬಹುದು ಅಂತ ಹಾಗೆ ಮಾಡಿರಬಹುದು" ಎಂದು ಸಮಜಾಯಿಷಿ ಹೇಳಿದಳಂತೆ. ವಾರಗಿತ್ತಿಗೆ ಪ್ರತಿನುಡಿದರೆ ಸಾಕು ಎನ್ನಿಸಿತ್ತು, ಸೊಸೆಯರಿಗೆ.

ಸೊಸೆಯರ ಮಾತು ಕೇಳಿ. ಗಂಡುಮಕ್ಕಳೂ ಗುರ್ ಗುರ್ ಎಂದರು. ತಿಮ್ಮಕ್ಕನೂ ರೇಗಿದಳು. "ನಿಮ್ಮ ಮನೆ ಪ್ರವಾಸವನ್ನ ರದ್ದುಮಾಡಿದ್ದೇನೆ" ಎಂದು ಬರೆಯಬೇಕು ಎಂದು ಕೂಗಾಡಿದಳು.

ಆದರೂ ಆಸೆ ಒಂದಿದೆಯಲ್ಲ! ರಂಗಜ್ಜಿ ಮನೆ ಬೆಂಬಲ ದೊರೆತರೆ, ಮೊಮ್ಮಗಳು ಸುಖವಾಗಿರಬಹುದು ಅಂತ. ಆ ಆಸೆ ತಿಮ್ಮಕ್ಕನ ಕೋಪವನ್ನು ತುಸು ಶಾಂತಗೊಳಿಸಿತಂತೆ.

—ಬಚ್ಚ.



ಅಡಿಗೆ ಚೆನ್ನಾಗಿಲ್ಲ ಅಂತ ರೇಗಿದೆ ಅಂತ ನೀನ್ಯಾಕೆ ಮುನಿಸುಕೋತೀ.
—ಎಕ್ಸಿಬಿಷನ್‌ಗೆ ಹೋಗಿ ಹುರಿಗಾಳು ಕೊಡುಕೊಂಡು ಬರೋಣ ಬಾ.

ಮಾಲೀಕರ ಅಪ್ಪಣೆ

ಮಧ್ಯಾಹ್ನ ೧ ಗಂಟೆ ಆಯಿತು. ಕಾಲೇಜು ಹುಡುಗರೆಲ್ಲ ತಿಂಡಿತಿನ್ನುಕ್ಕೆ ಬರುತ್ತಾರೆ. ಅಡಿಗೆ ಮನೆಯಿಂದ ಸುದ್ದಿ ಬಂತು. ದೋಸೆ ಹಿಟ್ಟು ಸರಿಯಾಗಿ ಹುದುಗು ಕೊಡಿಲ್ಲ ಅಂತ. ಅಂದರೆ ದೋಸೆ ಹಸಕಲು ಅಥವಾ ಕರಕಲು ಆಗಬಹುದು. ಇಡ್ಲಿನೂ ಸ್ವಲ್ಪ ಗಡಸುಕೊಂಡಿದೆ.

ಆದ್ದರಿಂದ ಮಾಣಿ, ರೆಕಾರ್ಡ್ ಚೇಂಜರ್‌ನಲ್ಲಿ

" ಬಾ ಪ್ರಿಯಾ ಪ್ರಶಾಂತ ಹೃದಯಾ "

" ಮೈಭಿ ಪ್ಯಾರ್ ಕರೂಂ "

" ಚಲ್ ಚಲ್ರೆ ನೌ ಜವಾನ್ "

" ನಿನ್ನಂತ ಹೆಣ್ಣು ಇನ್ನಿಲ್ಲ "

ಈ ನಾಲ್ಕನ್ನೂ ಹಾಕು. ಅವುಗಳನ್ನೇ ದೊಡ್ಡ ದನೀಲಿ ನುಡಿಸು." ಎಂದು ಹೋಟಲ ಮಾಲೀಕರು ಅಪ್ಪಣೆ ಇತ್ತರು.

* * * *

" ಸಂಜೆ ಆರು ಗಂಟೆ ಆಯಿತು. ಆಫೀಸ್ ನೌಕರರು ಮನೆಗೆ-ಹೋಗೋ ಹೊತ್ತು. ಇಲ್ಲಿ ಬಂದು ಒನ್ ಬೈಟು ಕಾಫಿ, ಒಂದು ವಡೆ ತಿನ್ನುತ್ತಾ ಕೂತು ಕಚೇರಿ ವ್ಯವಹಾರವನ್ನೆಲ್ಲ ಮುಗಿಸುತ್ತಾರೆ. ಅರ್ಧ ಗಂಟೆ ಆದರೂ ಎದ್ದುಹೋಗುಲ್ಲ. ಆದ್ದರಿಂದ ರೆಕಾರ್ಡ್ ಚೇಂಜರ್‌ನಲ್ಲಿ.

" ಮನುಜ ಶರೀರವಿದೇನು ಸುಖ "

" ಎಲ್ಲಾರು ಮಾಡುವುದು ಹೊಟ್ಟೆಗಾಗಿ "

" ಸುನೊಭೈ ಸಾಧೂ "

" ಕೌಪೀನ ಸಂರಕ್ಷಣಾರ್ಥಂ ಮಾರ್ಜಾಲಃ "

ಇವುಗಳನ್ನು ಹಾಕು. ಹಳೇ ನೀಡಲ್ ಇಡು. ಕರ ಕರ ಅಂತಿರಲಿ. ಆದಷ್ಟು ಬೇಗ ಬಂದೋರು ಹೋದಾರು, ಎಂದು ಅಪ್ಪಣೆ ಇತ್ತರು.

* * * *

ರಾತ್ರಿ ಎಂಟು ಗಂಟೆ ಆಯಿತು. ಬರೋರೆಲ್ಲ ತಿಂಡಿ ಕಟ್ಟಿಸಿಕೊಂಡೇ ಓಡ್ತಾರೆ. ಯಾರೂ ಕೂತು ತಿನ್ನುಲ್ಲ. ರೆಕಾರ್ಡ್ ಚೇಂಜರಿನಲ್ಲಿ

" ಮೈ ಕ್ಯಾ ಕರೂಂ "

" ಉಪ್ಪರ್ ದೇಖೋ ಠಿಂಲಿ ಮಿಂಲಿಕಾರೆ "

ಇವನ್ನು ಹಾಕು, ಎಂದು ಅಪ್ಪಣೆ ಇತ್ತರು.

ಪತ್ರ ಪ್ರಿಯ

★

ಯಾವುದೇ ವಿಷಯದಲ್ಲಿ ಯಾರೇ ಆಗಲಿ ವಿಷಯವನ್ನು ಮುಖಾಮುಖಿಯಾಗಿ ವಾದ ಮಾಡಿ ಮುಖ ಮುರಿದುಕೊಳ್ಳುವುದಕ್ಕಿಂತ ಪತ್ರ ಮುಖೇನ ತಿಳಿಸಿದರೇ ಒಳ್ಳೆಯದು ಎಂಬುದು ಪರಮೇಶಿಯ ಅಭಿಪ್ರಾಯ.

ಅಭಿಪ್ರಾಯವೇನು ಬಂತೂ, ಪ್ರಾಯ ಬಂದಾಗಿನಿಂದ ಅವನು ಅದೇ ನೀತಿಯನ್ನು ಪಾಲಿಸಿಕೊಂಡೇ ಬರುತ್ತಿದ್ದಾನೆ.

ತಿ॥ ತಂದೆಯವರಿಗೆ—ನ॥ ಗಳು.

ನಾನು ಸಿನಿಮಾಕ್ಕೆ ಹೋಗುವುದಕ್ಕೆ ಅಪ್ಪಣೆ ಬೇಡುತ್ತಿದ್ದೇನೆ. ಅಪ್ಪಣೆ ಚೀಟಿಯ ಜೊತೆಗೆ ಅದಕ್ಕೆ ಬೇಕಾದ ಟಿಕೆಟ್ಟಿನ ದುಡ್ಡು ಹೋಗ್ತಾ ಬರ್‍ತಾ ಬಂಡಿ ಖರ್ಚು–ವಿರಾಮವೇಳೆಯಲ್ಲಿ ಕುಡಿಯಬೇಕಾದ ಟೀಗೆ ಆಗುವ ಪೈಸೆಗಳನ್ನು ಕೊಡಿ.

ಸಾಷ್ಟಾಂಗದೊಡನೆ ಇತಿ ನಿಮ್ಮ ಮಗ

— ಪರಮೇಶಿ.

—ಎಂದು ತಂದೆಯವರ ಮೇಜಿನ ಮೇಲೆ ಚೀಟಿ ಬರೆದಿಟ್ಟ. ಇದೇನು ಪತ್ರ! ಎಂದು ಓದಿದರು. ಒಂದೇ ಮನೆಯಲ್ಲಿರುವಾಗ ಈ ರೀತಿ ಪತ್ರವೇಕೆ? " ಪರಮೇಶಿ " ಎಂದು ಗುಟುರು ಹಾಕಿದರು. ಪರಮೇಶಿ ಭಯಸ್ಥ. ತಂದೆಯವರಲ್ಲಿ ಎದುರು ನಿಂತು ಮಾತನಾಡಲು ನಾಲಿಗೆ ತೊದಲುತ್ತಿದ್ದುದರಿಂದಲೇ ಪತ್ರಮುಖೇನ ತಿಳಿಸಿದ್ದ.

" ಲೇ ದನಾ ಕಾಯೋನೇ "—ಎಂದು ಮತ್ತೊಮ್ಮೆ ಗೂಳಿಯಂತೆ ಗುಟುರು ಹಾಕಿದರು. ಕೈ ಹೊಸೆಯುತ್ತಾ ಪರಮೇಶಿ ಬಂದ.

" ಪರೀಕ್ಷೆ ಆತೇನಲೇ... ಸಿನಿಮಾ—ನಾಟಕ ಅಂತ ಯಾಕಲೆ ರೊಕ್ಕ ದಂಡ ಮಾಡ್ತೀ "

ಪರಮೇಶಿ ಜೇಬಿಗೆ ಕೈ ಹಾಕಿದ. ಇನ್ನೊಂದು ಚೀಟಿ ತೆಗೆದು ಅಪ್ಪನ ಮುಂದೆ ಇಟ್ಟ.

ತಿ॥ ರೂಪರೇ—

ನನ್ನ ಈ ಹಿಂದಿನ ಪತ್ರಕ್ಕೆ ಈ ರೀತಿ ಬುಲಾವು ಬರಬಹುದೆಂದು ತಿಳಿದಿದ್ದೆ.

ಅದಕ್ಕೆ ಈ ಪತ್ರ ಸಿದ್ಧಮಾಡಿಕೊಂಡೆ...ರೆಡಿ ಆಗಿದ್ದೆ. ಪರೀಕ್ಷೆ ಆಯ್ತು—ಪಕ್ಕದಲ್ಲೇ ಆ ಮುನ್ಸಿಪಲ್ ಮಗ ಕೂತಿದ್ದ—ಅವನ ಉತ್ತರ ಕಾಣುತ್ತಿತ್ತು—ನೀವು ಹಿಂದೆ ಲೋಯರ್ ಸೆಕೆಂಡ್ರೀಲಿ ಪಾಸ್ ಆದಾಗ ಪಕ್ಕದವನ ಕೃಪೆಯಿಂದ ಕಾಪಿ ಹೊಡೆದು ಹ್ಯಾಗೆ ಪಾಸ್ ಆದದ್ದೆಂದು ಹೇಳಿದ ಕಥೆ ನೆನಪಿದೆ. ನಾನು ನಿಮ್ಮ ಮಗ—ಹಾಗೇ ಪ್ಯಾಸ್ ಆಗುವೆನೆಂದೂ ಕುಟುಂಬದ ಹಿರಿಯರು ಹಾಕಿದ ಮೇಲ್ಪಂಕ್ತಿಯನ್ನೇ ನಾನು ಅನುಸರಿಸುತ್ತಿದ್ದೇನೆ—ಆ ಪರಂಪರೆಗೆ ಅವಮಾನ ಮಾಡಲು ನನಗೆ ಇಷ್ಟವಿಲ್ಲ.

ಕೃಪೆಮಾಡಿ. ಸಿನಿಮಾ ಸತ್ಯ ಹರಿಶ್ಚಂದ್ರ

—ಪರಮೇಶಿ.

ಕನ್ನಡಕ ಸರಿಪಡಿಸಿಕೊಂಡ ತಂದೆ ನಾಗೇಂದ್ರಪ್ಪನವರು ಆ ಪತ್ರ ಓದಿದರು. ಕೆಟ್ಟಕಣ್ಣಲ್ಲಿ ಸುಪುತ್ರನನ್ನು ನೋಡಿದರು. ಮೂರು ರೂಪಾಯಿ ನೋಟುಗಳನ್ನು ಮೇಜಿನ ಮುಂದೆ ಇಟ್ಟಿದ್ದರು. ಮರುಮಾತೇ ಆಡಿರಲಿಲ್ಲ. ಪರಮೇಶಿ ಅದನ್ನೆತ್ತಿ ಕೊಂಡು ಹೋದ.

ಎದುರಾ ಎದುರು ಮಾತಾಡುವಾಗ "ತಂದೆಯೇ ನೀನೇ ಕಾಪಿಹೊಡೆದು ಎಲ್. ಎಸ್. ಮಾಡಲಿಲ್ಲವೆ ?" ಎಂದು ಯಾವ ಮಗ ತಾನೇ ಹೇಳಲು ಸಾಧ್ಯ ? ಅದೇ ಬರಹದಲ್ಲಿ ಆದರೆ ಬೇಕಾದ್ದು ತಿಳಿಸಬಹುದು.

ಹೀಗೆ ಪರಮೇಶಿ ಮಹಾ ಪತ್ರಪ್ರಿಯನಾಗಿ ಬೆಳೆದು ಬಂದ. ಕಾಲೇಜು ಮುಗಿಸಿ ತಂದೆಯವರ ಮಂಡಿಯಲ್ಲೇ ಗೋಣೀ ಚೀಲ ಲೆಕ್ಕಹಾಕುವುದೇ ಅಥವ ಖಾದಿ ಹಾಕಿ ದೇಶ ಸೇವೆಗಿಳಿಯುವುದೇ ಎಂಬುದು ಅವನಿಗೆ ಪ್ರಶ್ನೆಯಾಯಿತು.

ದೇಶ ಸೇವೆಯ ಗುಂಗು ಅವನಿಗೆ ಹಿಡಿಯುತ್ತಿರಲಿಲ್ಲ. ಎದುರು ಮನೆ ಹುಡುಗಿಯ ತಂದೆ ಮೂಗಪ್ಪನೇ ಇದಕ್ಕೆ ಕಾರಣ. ಅವಳ ಅಪ್ಪ ಅಪ್ಪಟ ದೇಶ ಭಕ್ತರು. ಮೂಗರ್ಜಿಗಳಿಂದಲೇ ಅವರು ಮೇಲಕ್ಕೇರಿ ಬಂದರೆಂದು ಪರಮೇಶಿ ಕೇಳಿಬಲ್ಲ. ಅಂಥವರ ಮಗಳು ಎಂತಹ ಪ್ರೇಮ ಪತ್ರಗಳನ್ನು ನಿರೀಕ್ಷಿಸುತ್ತಿರ ಬಹುದು ? ಆದರೆ ಅವಳ ಇಷ್ಟ ಹೇಗಿದೆಯೋ...ನೋಡಿ ನಕ್ಕು—ಕಣ್ಣು ಮಿಟುಕಿಸಿ —ಹಲ್ಲುಗಿರಿದು ಅವಳ ಮೈಡೊಂಕನ್ನು ಮೆಚ್ಚಿ ತೃಪ್ತಿಯ ನೋಟ ಬೀರಿ, ಮಾಮೂ ಲಿಯ ಪ್ರೀತಿ ತೋರಿಸುವ ಕಾಮನ್ ಬೀದಿ ಕಾಮಣ್ಣಗಳ ಜಾಡು ಹಿಡಿಯಲಿಲ್ಲ ತನ್ನ ಪ್ರಿಯವಾದ ಪತ್ರ ವಿದ್ಯೆಗೆ ಮಾರುಹೋದ. ಸೆಂಟು ಸಿಂಪಡಿಸಿದ ಕಾಗದದಲ್ಲಿ ಮಲ್ಲಿಗೆ ಪರಿಮಳದಲ್ಲಿ ಮಾಡಿದ ಮಸಿಯಲ್ಲಿ ಕಾಗದ ಬರೆಯಲಿಲ್ಲ, ಗುಂಡು ಅಕ್ಷರದಲ್ಲಿ ರಾಗಿ ಮಸಿಯಲ್ಲಿ ಕೊರೆದಿದ್ದ.

ಶ್ರೀಮತಿ ಮರುಳಮ್ಮನವರಲ್ಲಿ, ಪರಮೇಶಿಯ ವಿನಂತಿ—

ನಾನು ನಿಮ್ಮನ್ನು ಪ್ರೀತಿಸಿದ್ದೇನೆ. ನನ್ನದು ರಾಜಮಾರ್ಗ. ಯಾವುದನ್ನೂ ಪತ್ರಮುಖೇನ ಬರೆದು ಅದಕ್ಕೆ ಲಿಖಿತ ಉತ್ತರಪಡೆಯುವ ನಂಬುಗೆಯವ ನಾನು.

ನಾನು ಓದು ಮುಗಿಸಿದ್ದೇನೆ. ಮುಂದೆ ಮಂಡಿಗೆ ಬಾ ಅಂತ ತಂದೆಯವರನ್ನು ತ್ತಾರೆ. ಆದರೆ ನಾನು ದೇಶಸೇವೆಗೆ ನಿಂತಿದ್ದೇನೆ.

ನನ್ನ ಕ್ಷೇತ್ರದಿಂದ ಉಮೇದುವಾರಿಕೆಗೆ ನಿಮ್ಮ ತಂದೆ ನಿಂತಿದ್ದಾರೆ. ನಾನೂ ನಿಲ್ಲುವೆ

ಪ್ರೇಮ ಕುರುಡು

ನಿನ್ನ ಪತ್ರಾಕಾಂಕ್ಷಿ

ಪರಮೇಶಿ.

*   *   *   *

—ಇದಕ್ಕೆ ಮರುಳಮ್ಮನ ತಂದೆಯೇ ಉತ್ತರಿಸಿದರು.

ಎಲೈ ಎಳೆನಿಂಬೆ—

ರಾಜಕೀಯ ಎಂದರೆ ಪರೀಕ್ಷೇಲಿ ಕಾಪಿ ಹೊಡೆದ ಹಾಗೆ ಅಂತ ತಿಳಿದೇನು ? ಚೋಟುದ್ದ ಹುಡುಗ, ನನ್ನ ಮಗಳಿಗೆ ಪತ್ರ ಬರೆಯುವಂತಾದೆಯಾ "ಬೇಕೂಫ್" ಎಂದು ಬೈದುಬಿಡುತ್ತಿದ್ದೆ. ಆದರೆ ಇದು ಡೆಮಾಕ್ರಸಿ ದೇಶ ನೀನೂ ಓಟಿಗೆ ನಿಂತು ಮಂತ್ರಿಯೇ ಆಗಿಬಿಡಬಹುದಾದ ಸಂದರ್ಭ ಉಂಟು. ಆದರೇನಂತೆ. ಆಗಲೂ ಹಾಗೆ ಅನ್ನಬಹುದು.

ಈಗ ನೀನು ಏನು ಕೊಟ್ಟರೆ ನಿನ್ನ ಉಮೇದುವಾರಿಕೆ ವಾಪಸ್ಸು ಪಡೆಯುವೆ ? ಎದುರ ಳಿಯೊಬ್ಬನೂ ಇಲ್ಲದೆ ಅವಿರೋಧ ಆಯ್ಕೆಯ ಬಯಕೆ ನಂದು...ನೇರವಾಗಿ ನನ್ನನ್ನೇ ಬಂದು ಮಗಳನ್ನು ಕೊಡಿ ಎಂದು ಕೇಳಬಾರದಾಗಿತ್ತೇ ... ಈ ಪತ್ರ ಪ್ರಸಂಗವೇಕೆ ? ಉತ್ತರ ಕೊಡು.

—ಮೂಗಪ್ಪ.

*   *   *   *

ಶ್ರೀ ಮೂಗಪ್ಪನವರ ಸ॥ಕ್ಕೆ

ಬಾಲಕ ಪರಮೇಶಿಯ ಶರಣಾರ್ಥಿಗಳು. ನಿಮ್ಮ ಮಗಳಿಗೆ ಪತ್ರ ಬರೆದರೆ ನೀವು ಉತ್ತರಿಸಿದ್ದೀರಿ. ಪರವಿಲ್ಲ ಬಿಡಿ. ನಾನು ನಿಮ್ಮನ್ನು ಕೇಳುವುದಿಷ್ಟೆ. ನಿಮ್ಮ ಉಮೇದುವಾರಿಕೆ ಅವಿರೋಧವಾಗಿ ನಿಂತು ಗೆಲ್ಲಬೇಕಾದರೆ ಒಂದೇ ಮಾರ್ಗ. ನನಗೆ ಆಗುವ ಹತ್ತು ಸಾವಿರ ಖರ್ಚನ್ನು ತುಂಬಿಕೊಡಿ. ಅದನ್ನು ಖರ್ಚುಮಾಡಲು ನಿಮ್ಮ ಮಗಳು ಮರುಳಮ್ಮನನ್ನು ನನಗೆ ಕೊಡಿ ಅಂದರೆ ನಾನು ತೆಪ್ಪಗೆ ಇರುವೆ.

ಇತಿ ಮರುಳಮ್ಮ ಪ್ರಿಯ,

ಪರಮೇಶಿ.

*   *   *   *

ಶ್ರೀಮಾನ್ ನಾಗೇಂದ್ರಪ್ಪನವರಿಗೆ—ನ॥ ಗಳು.

ಮೂಗಪ್ಪನು ಈ ಮೂಲಕ ತಿಳಿಸುವುದೇನೆಂದರೆ, ನಿಮ್ಮ ಮಗ ಪರಮೇಶಿ ದುರ್ಗಮವಾದ ರಾಜಕೀಯದ ಕಾಡಿನಲ್ಲಿ ಬೇಸಾಯ ಹೂಡಲು ಹೊರಟಿದ್ದಾನೆ ಅಲ್ಲದೆ ನನ್ನ ಮಗಳು ಮರುಳಮ್ಮನಿಗೆ ಏನೇನೋ ಪತ್ರ ಬರೆದಿದ್ದಾನೆ ಇದು ತಪ್ಪು. ಬೆಳೆದ ಹುಡುಗಿಗೆ ಬಲಿತ ಈತ ಹೀಗೆ ಬರಿಯಬಹುದೆ ? ನೀವು ಮರ್ಯಾದಸ್ತ ಮಂಡಿಯವರು ಕೇವಲ ನಾಲ್ಕೆಸಲ ಕಾಳಸಂತೆಯಲ್ಲಿ ಕಾಳು ಮಾರಿದ್ದಕ್ಕೆ ಶಿಕ್ಷೆ ಆಗಿದೆ ಅಷ್ಟೆ ಅದನ್ನೂ ನನ್ನ ರಾಜಕೀಯ ಮೂಗರ್ಜಿಗಳಿಂದಲೇ ಬಿಡಿಸಿದ್ದೇನೆ

ಆದ್ದರಿಂದ ನಾನು ಹೇಳುವುದಿಷ್ಟೆ—ಪರಮೇಶಿಯಿಂದ ಆ ಕ್ಷೇತ್ರದ ಉಮೇದು ವಾರಿಕೆ ಹಿಂದೆ ತೆಗಿಸಿಬಿಡಿ ಇಲ್ಲವಾದರೆ ಮರುಳಮ್ಮನಿಗ ಪತ್ರ ಬರೆದದ್ದಕ್ಕೆ ಪೋಲೀಸಿಗೆ ತಿಳಿಸಿ, ಜೈಲು ಕಾಣಿಸುವೆ.

ಇತಿ,

ಮೂಗಪ್ಪ.

* * * *

ಮೂಗರ್ಜಿ ಮೂಗಪ್ಪನಿಗೆ,

ನಾಗೇಂದ್ರನ ಆ॥ಗಳು, ಎಲ್ಲೈ ಆರೋಗ್ಯ ನಾನೇನು ನೀನೇನು. ನನ್ನನ್ನು ನೀನು ಬಿಡಿಸುವುದೆ ? ನಾನೆ ಬಿಡಿಸಿಕೊಳ್ಳಬಲ್ಲೆ. ಪರಮೇಶಿ ನಿನ್ನ ಮಗಳಿಗೆ ಪತ್ರ ಬರೆದಿದ್ದು ತಪ್ಪು ರಾಜಕೀಯಕ್ಕೂ ಪ್ರೇಮ ಪ್ರೀತಿಗೂ ಗಂಟುಹಾಕಬಾರದು. ಪರಮೇಶಿಗೆ ನಾನು ಹೇಳಿದೆ, ಈ ರಾಜಕೀಯ ಬ್ಯಾಡ. ಅದಕ್ಕಿಂತ ಮಂಡೀಲೇ ಲಾಭ ಜಾಸ್ತಿ ಅಂತ ಅಂದೆ. ಆದರೆ ಅವನು ನನಗೇ ಪತ್ರಬರೆದು ತಿಳಿಸಿದ್ದಾನೆ "ಅಪ್ಪಾ—ನೀನು ಮಂಡಿಯಲ್ಲಿದ್ದು ನಾನು ದೇಶ ಸೇವೆಯ ವ್ಯಾಪಾರದಲ್ಲಿ ಸೇರಿಕೊಂಡರೆ ಒಬ್ಬರಿಗೊಬ್ಬರು ಅನುಸರಿಸಿಕೊಂಡು ನನ್ನ ವರ್ಚಸ್ಸಿಂದ ಮಂಡಿಯೂ ಬಡಾಯಿಸುತ್ತೆ, ನಾನೂ ಬದುಕುವೆ" ಅಂತ ಬರೆದು ತಿಳಿಸಿದ್ದಾನೆ. ಆದ್ದರಿಂದ ಅವನ ಉಮೇದುವಾರಿಕೆಗೆ ಅವನೇ ಜವಾಬ್ದಾರ.

ಇನ್ನೊಮ್ಮೆ ಇಂತಹ ಹುಡುಗಾಟಿಕೆ ಪತ್ರ ಬರೆಯದಿರು. ಎಚ್ಚರಿಕೆ.

ನಿನ್ನವ,

ನಾಗೇಂದ್ರ.

* * * *

ಪ್ರೀತಿಯ ಪರಮೇಶ್ವರಪ್ಪನವರ ಪಾದಪದ್ಮಂಗಳಿಗೆ—

ನಿಮ್ಮ ಮುಖಕಮಲ ನೋಡಿ, ನಿಮ್ಮ ಸೆರೆಯಾಳಂತೆ ಆಗಿರುವ ಮರುಳಮ್ಮನ ನ॥ಗಳು.

ನಾನೇನೂ ಬರೆಯಲಾರೆ. ತಂದೆಯವರು ಹತ್ತು ಸಾವಿರ ಹೊಂಚಲಿಕ್ಕೆ ಹೋಗಿದ್ದಾರೆ. ಬರುವ ಮಾಘದಲ್ಲೇ ಲಗ್ನ ಆಗಲೆಂದು ಅಮ್ಮ ಹೇಳಿದಳು, ಮುದ್ದಿನ ಮಗಳಾದ ನನ್ನದೇ ಹಟ ಗೆಲ್ಲುತ್ತೆ ಈ ಮನೇಲಿ.

ನೀವು ಬಿಗಿಯಾಗಿರಿ—ಹಣ ಕೈಗೆ ಬರುವವರೆಗೆ ಉಮೇದುವಾರಿಕೆ ಹಿಂದೆಗೆಯ ಬೇಡಿ.

ನಿಮ್ಮ ಪರ್ಸ್‌ದಾಸಿ,
—ಮರುಳಮ್ಮ.

* * * *

ಶ್ರೀಯುತ ಮೂಗರ್ಜಿ ಮೂಗಪ್ಪನವರಿಗೆ—

ನೀವು ಹಮಾಲರ ಹತ್ತಿರ ಕಳಿಸಿದ ಹತ್ತು ಸಾವಿರ ಕೈ ಸೇರಿದೆ. ಮರುಳಮ್ಮನ ಕೈ ಬೇಗ ನನ್ನ ಕೈಸೇರುವಂತಾಗಬೇಕು. ಅಂದರೆ ನಾನು ಉಮೇದುವಾರಿಕೆ ಹಿಂದೆಗೆಯಲು ಅವಳೇ ನನ್ನ ಕೈಲಿ ತೆಗೆಸಬೇಕು.

ನಮ್ಮ ತಂದೆಯವರಿಗೆ ಹೇಳಿದೆ. ಮದುವೆ ಆದ ಮೇಲೆ ಆ ಮಾತು ಎಂದರು,

ಮರುಳಿ ನನ್ನ ಮರುಳು ಮಾಡಿದ್ದಾಳೆ. ಅವಳು ನಿಮ್ಮ ಮಗಳಾಗದಿದ್ದರೆ ನಾನು ರಾಜಕೀಯದಿಂದಲೇ ಅವಳನ್ನು ಮರುಳುಮಾಡಿ ಮದುವೆಯಾಗುತ್ತಿದ್ದೆ ಇರಲಿ ಈ ಅವಳೇ ನನ್ನ ನೋಡಿದ್ದಾಳೆ.

ಅವಳ ಇರಾದೆಯಂತೆ ಬೇಗ ಲಗ್ನ ಆಗಲಿ — ನಂತರ ನನ್ನ ರಾಜಕೀಯ ನಿರ್ಗಮನ.

ಇತಿ ಭಾವಿ ಅಳೀಮಯ್ಯ,
ಪರಮೇಶ.

* * * *

—ಪರಮೇಶಿಗೆ ದುಡ್ಡೂ ಬಂತು ಲಗ್ನವೂ ಆಯಿತು. ಆದರೆ ಅವರಪ್ಪಗೆ ಮತ್ತೆ ಜೈಲಾಗುವ ಸೂಚನೆಗಳು ಬಂದದ್ದರಿಂದ ನಿರ್ವಾಹವಿಲ್ಲದೆ ಪರಮೇಶಿ ಉಮೇದುವಾರಿಗೆ ಹಿಂದೆಗೆಯಲಿಲ್ಲ ಮರುಳಮ್ಮನ ತಂದೆಯೇ ಸೋಲುವಂತೆ ಎದುರಾಳಿಯಾಗಿಯೂ ನಿಂತು ಗೆದ್ದು ತಂದೆಯ ಮಂಡಿ ಉದ್ಧಾರಮಾಡಿದ ಮಗ. ಪತ್ರಪ್ರಿಯನಿಗೆ ಎಂತಹ ಜಯ !!

—ದಾಶರಥಿ ದೀಕ್ಷಿತ್.

ಸಾಕ್ಷಿ-ಸಂಕಲಿಕೆ

ಬಾಳ ರೀತಿ ನೀತಿಗಳನ್ನು ಸಾಕ್ಷಿ ನೋಡಿದ

ರಾ. ತಿ.

ಯವರ

ವಚನಗಳು

★

ಅರಿವಿನತ್ತ ಕರೆದೊಯ್ಯುವುದು

ಬೆಲೆ: ೨-೫೦

★

ಕೊರವಂಜಿ ಕಾರ್ಯಾಲಯ ಗಾಂಧಿನಗರ ಪೋಸ್ಟ್

ಬೆಂಗಳೂರು-೯

Koravanji, May 1965



For 3 way Beauty Treatment....
RAJA
SNOW
AMLA HAIR OIL
KASTURI SOAP
MANYAM & CO. BANGALORE MADRAS MADURAI BOMBAY

Printed by B. S. Iyengar, Bangalore-2

Publisher—B. N. Gupta Editor—M. Shivaram